Original Article
ISSN (Online): 2582-7472

ShodhKosh: Journal of Visual and Performing Arts
July-December 2024 5(2), 554–563

# POSSIBILITIES AND CHALLENGES OF AGRICULTURAL CULTURE EDUCATION IN SHORT STORIES

# ಸಣ್ಣಕತೆಗಳಲ್ಲಿ ಕೃಷಿ ಸಂಸ್ಕೃತಿಯ ಶಿಕ್ಷಣದ ಸಾಧ್ಯತೆಗಳು ಮತ್ತು ಸವಾಲುಗಳು

Harisha Gowda [1]

[1] Assistant Professor of Kannada, Maharani's Arts College for Women, Mysore

## ABSTRACT

**English:** Harmony between the educated and the uneducated among farmers: In the story "Muttu", the difficulties of harmony between the life of a farming family and those who have gone to Bangalore city to get an education and work are expressed through the experiences of the village and the city dwellers. The heroine of this story, "Nimmi", says, "I have felt a thousand times that I could have married a landlord and become a gardener. It is only a feeling, but the infatuation of the magical city of Bangalore leaves no one. There is a crazy desire to cut down something here, build a fence and save it. What is being achieved is nothing, only the necessities of food and clothing for two days.

**Hindi:** ಕೃಷಿಕರಲ್ಲಿ ಶಿಕ್ಷಣ ಕಲಿತ ಮತ್ತು ಕಲಿಯದೆ ಇರುವವರ ನಡುವಿನ ಸಾಮರಸ್ಯ: "ಮುಟ್ಟು" ಕತೆಯಲ್ಲಿ ಕೃಷಿ ಕುಟುಂಬದ ಬದುಕು ಮತ್ತು ಕೃಷಿ ಕುಟುಂಬದಿAದ ಶಿಕ್ಷಣ ಪಡೆದು ದುಡಿಯಲು ಬೆಂಗಳೂರು ಸಿಟಿಗೆ ಹೋದವರ ನಡುವಿನ ಸಾಮರಸ್ಯದ ತೊಡಕುಗಳು, ಹಳ್ಳಿ ಮತ್ತು ನಗರವಾಸಿಗಳ ಅನುಭವದ ಮೂಲಕ ಅಭಿವ್ಯಕ್ತಗೊಳ್ಳುತ್ತವೆ. ಈ ಕತೆಯ ನಾಯಕಿ "ನಿಮ್ಮಿ" "ಯಾವ್ದಾದ್ರು ಜಮೀನ್ದಾರನ್ನ ಮದುವೆಯಾಗಿ ತೋಟಗಾರಿಕೆ ಅಂತ ಹಾಯಾಗಿರಬಹುದಿತ್ತು ಅಂತ ಸಾವಿರಸಲ ಅನಿಸಿದೆ. ಬರಿ ಅನಿಸುವುದಷ್ಟೇ, ಆದರೆ ಬೆಂಗಳೂರು ಎಂಬ ಮಾಯಾ ನಗರಿಯ ವ್ಯಾಮೋಹ ಯಾರನ್ನು ಬಿಡುತ್ತದೆ. ಇಲ್ಲೇನೋ ಕಡಿದು ಕಟ್ಟೆ ಹಾಕಿ ಉದ್ಧಾರ ಮಾಡುವುದಿದೆ, ಎಂಬ ಹುಚ್ಚು ಹಂಬಲ. ಸಾಧಿಸುತ್ತಿರುವುದು ಏನೂ ಅಲ್ಲ ಎರಡು ಹೊತ್ತಿನ ಊಟ ಬಟ್ಟೆ ಅವಶ್ಯಕತೆಗಳನ್ನಷ್ಟೇ.

**DOI**
10.29121/shodhkosh.v5.i2.2024.3984

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

## 1. INTRODUCTION

ಪ್ರವೇಶ

ಕೃಷಿಕರಲ್ಲಿ ಶಿಕ್ಷಣ ಕಲಿತ ಮತ್ತು ಕಲಿಯದೆ ಇರುವವರ ನಡುವಿನ ಸಾಮರಸ್ಯ: "ಮುಟ್ಟು" ಕತೆಯಲ್ಲಿ ಕೃಷಿ ಕುಟುಂಬದ ಬದುಕು ಮತ್ತು ಕೃಷಿ ಕುಟುಂಬದಿAದ ಶಿಕ್ಷಣ ಪಡೆದು ದುಡಿಯಲು ಬೆಂಗಳೂರು ಸಿಟಿಗೆ ಹೋದವರ ನಡುವಿನ ಸಾಮರಸ್ಯದ ತೊಡಕುಗಳು, ಹಳ್ಳಿ ಮತ್ತು ನಗರವಾಸಿಗಳ ಅನುಭವದ ಮೂಲಕ ಅಭಿವ್ಯಕ್ತಗೊಳ್ಳುತ್ತವೆ. ಈ ಕತೆಯ ನಾಯಕಿ "ನಿಮ್ಮಿ" "ಯಾವ್ದಾದ್ರು ಜಮೀನ್ದಾರನ್ನ ಮದುವೆಯಾಗಿ ತೋಟಗಾರಿಕೆ ಅಂತ ಹಾಯಾಗಿರಬಹುದಿತ್ತು ಅಂತ ಸಾವಿರಸಲ ಅನಿಸಿದೆ. ಬರಿ ಅನಿಸುವುದಷ್ಟೇ, ಆದರೆ ಬೆಂಗಳೂರು ಎಂಬ ಮಾಯಾ ನಗರಿಯ ವ್ಯಾಮೋಹ ಯಾರನ್ನು ಬಿಡುತ್ತದೆ. ಇಲ್ಲೇನೋ ಕಡಿದು ಕಟ್ಟೆ ಹಾಕಿ ಉದ್ಧಾರ ಮಾಡುವುದಿದೆ, ಎಂಬ ಹುಚ್ಚು ಹಂಬಲ. ಸಾಧಿಸುತ್ತಿರುವುದು ಏನೂ ಅಲ್ಲ ಎರಡು ಹೊತ್ತಿನ ಊಟ

ಬಟ್ಟೆ ಅವಶ್ಯಕತೆಗಳನ್ನಷ್ಟೇ. ಆದರೂ ರಜೆಗೆ ಊರಿಗೆ ಹೋದಾಗ ನಿನಗೇನಮ್ಮ ಇಬ್ಬರಿಬ್ಬರು ದುಡೀತೀರಿ ಕಾರು ಸ್ವಂತ ಮನೆ ಇನ್ನೇನಮ್ಮ ಬೇಕು? ಅವಳ ಮಕ್ಕಳು ಎಷ್ಟು ಚೆನ್ನಾಗಿ ಇಂಗ್ಲೀಷ್ ಮಾತಾಡ್ತವೆ ಈ ವಯಸ್ಸಿಗೆ ಕಂಪ್ಯೂಟರ್ ಅರೆದು ಕುಡಿದುಬಿಟ್ಟಿವೆ". ಈ ಪ್ರತ್ಯುತ್ತರಗಳು ಕಲಿಯದೆ ಇರುವ ಕೃಷಿಕ ಹೆಣ್ಣಿನ ರೋಧನೆ ಅಭಿವ್ಯಕ್ತಗೊಂಡಿವೆ. ಕಲಿತು ನಗರದಲ್ಲಿ ದುಡಿಯುವ ಕೃಷಿ ಕುಟುಂಬಕ್ಕೆ, ಕುಟುಂಬ ನಿಭಾಯಿಸುವ ಧೈರ್ಯ ಸಾಲದಾಗಿದೆ. ಹಳ್ಳಿಗಳಲ್ಲಿ ಕಲಿಯದವರ ಸವಾಲುಗಳನ್ನು ಸ್ವೀಕರಿಸುವಂತದ್ದು ನಗರದಲ್ಲಿ ದುಡಿಯುವ ಕೃಷಿ ಕುಟುಂಗಳ ಕಷ್ಟ ಹೇಳತೀರದು. ಅವರು ಕಂಪ್ಯೂಟರ್ ಜ್ಞಾನವನ್ನು ಕಲಿತ್ತಿದ್ದಾರೆ. ನೌಕರಿ ಇದೆ, ನಗರಕ್ಕೆ ಹೋಗಿ ಕುಟುಂಬ ಸಮೇತ ಇಬ್ಬರು ದುಡಿಯುತ್ತಿದ್ದಾರೆ, ಕಾರು, ಹಣ, ಎಲ್ಲ ಇದೆ ಆದರೆ ಅವರಿಗೆ ನೆಮ್ಮದಿ ಇಲ್ಲ. ಆಸೆ ಆಕಾಂಕ್ಷೆಗಳ ಅಡಿಯಲ್ಲಿ ತಮ್ಮ ಮನಸ್ಸಿನ ಭಾವನೆಗಳು ಸತ್ತು ಹೋಗುತ್ತಿವೆ. ತಮ್ಮ ಭಯಕೆಯನ್ನು ತೀರಿಸಿಕೊಳ್ಳುವ ದಾಹವಿದ್ದರೂ, ಅದು ಈಡೇರದ ಸ್ವಪ್ನದಂತೆ. ಅಕ್ಷರ ದಾಸೋಹದ ತೀವ್ರತೆ ಕಷ್ಟದಲ್ಲಿರುವ ಕೃಷಿಕರ ಮನೆತನದಲ್ಲಿದ್ದು ಶಿಕ್ಷಣ ಕಲಿತವರನ್ನು ಕಾಡುತ್ತವೆ. ಈ ಪರಿಕಲ್ಪನೆಗಳು ಶಿಕ್ಷಣ ಕಲಿತು ನಗರದ ಜಾಡು ಹಿಡಿದು ಹೋಗಿ ದುಡಿಯುವವರ ಬಿಕ್ಕಟ್ಟುವಿಗೆ ಇಂತಹದೊAದು ಸಮಸ್ಯೆ ಎದುರುಗೊಳ್ಳುತ್ತದೆ. ಅಲ್ಲಿ ದುಡಿಯುವವರ ಮನಸ್ಸುಗಳು ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಪಡಿಸಲಾರದೆ ತೊಳಲಾಡುತ್ತಾರೆ. ಹೀಗಿದ್ದಲ್ಲಿ ಶಿಕ್ಷಣದ ಮುಂದುವರಿಕೆ ಎಂಬ ಪ್ರಶ್ನೆ ಕೃಷಿಕನನ್ನು ಬೆಂಬತ್ತಿ ಕಾಡುತ್ತದೆ. ಕಲಿತು ದುಡಿಯುವವರ ಸಮಸ್ಯೆಗಳು ಹಲವು. ಅದರಲ್ಲಿ ಕುಟುಂಬವು ಒಂದು. ಕುಟುಂಬವನ್ನು ಸಾಕಿ ಬೆಳಸುವುದಕ್ಕೆ ಒದ್ದಾಡುತ್ತಿರುವುದು. ಆ ಕುಟುಂಬದ ಸಮಸ್ಯೆ ಯಾವ ಬಿಕ್ಕಟ್ಟುವಿನಲ್ಲಿದೆ ಎಂಬ ಮಾರ್ಮಿಕ ಒಳಸುಳಿವು, ಶಿಕ್ಷಣಕ್ಕೆ ಸವಾಲಾಗಿ, ನಮ್ಮ ನಿಮ್ಮನ್ನೆಲ್ಲರನ್ನು ಎದುರುಗೊಳ್ಳುತ್ತವೆ. ಎದುರುಬರುವ ಸಮಸ್ಯೆಗಳನ್ನು ಹೊತ್ತುಕೊಂಡು ಕೃಷಿಕ ಬದುಕನ್ನು ನಡೆಸುವ ಸಾಧ್ಯತೆ ಯಾರಿಗಿದೆ ಎಂಬ ಪ್ರಶ್ನೆ! ಪ್ರಶ್ನೆಯಾಗಿಯೇ ಉಳಿದುಬಿಡುತ್ತದೆ. ಈ ಈಕ್ಕಟ್ಟುಗಳೇ ಕೃಷಿಕರ ಅಂತಿಮ ವಿಧಾಯಕ್ಕೆ ತಮ್ಮನ್ನು ತಾವೇ ಸಮರ್ಪಿಸಿಕೊಳ್ಳುತ್ತಿದ್ದಾರೆ. ಈ ಒಂದು ನೀಲಿ ನಕ್ಷೆ ನಮ್ಮ ನಿಮ್ಮೆಲ್ಲರನ್ನು ಭಯಗೊಳಿಸಿಬಿಟ್ಟಿದೆ. ಆ ಮಂಕುತನದ ಮೌಢ್ಯತೆಯಿಂದ ಹೊರಬರಬೇಕು. ಏನೇ ಸಮಸ್ಯೆ ಏದುರಾದರು ಅದನ್ನು ಎದುರಿಸುತ್ತೇನೆ ಎಂಬ ಧೈರ್ಯವನ್ನು ಹುಟ್ಟುಹಾಕಬೇಕು? ಆಗಲೇ ಜಯದ ಆದಿ ನಮ್ಮದಾಗುತ್ತದೆ. ಈ ಪ್ರಶ್ನೆಯನ್ನು ಕೃಷಿಕರ ಸಾರ್ವತ್ರಿಕ ಹೊಣೆಯನ್ನಾಗಿಸುವುದು ಸೂಕ್ತಮಾರ್ಗ. ಆಗ ಶಿಕ್ಷಣದತ್ತ ಎಲ್ಲಾ ಕೈಗಳು ಒಟ್ಟುಗೂಡುತ್ತವೆ.

ಕೃಷಿಕರಲ್ಲಿ ಶಿಕ್ಷಣವೆಂಬ ಸ್ವಪ್ನದ ಪರಿಕಲ್ಪನೆ: 'ನೀಲ ಗಂಗಾ ಚರಂತಿಮಠ' ಅವರ "ತೊಟ್ಟಲು ತೂಗಲಿಲ್ಲ" ಎಂಬ ಕತೆಯಲ್ಲಿ ಕೃಷಿ ಕುಟುಂಬದಲ್ಲಿ ಬೆಳೆಯುತ್ತಿರುವ ಮಕ್ಕಳ ಬದುಕಿನ ಅನನ್ಯತೆಯಲ್ಲಿ ಶಿಕ್ಷಣದ ಅಸ್ಮಿತೆ ಒಲವು ಅವರನ್ನು ಕಾಡುತ್ತಿದೆ. ಒಂದು ತೆರದಲ್ಲಿ ಸಮಾಜದಲ್ಲಿ ಹುಟ್ಟಿ ಬೆಳೆಯುತ್ತಿರುವ; ಅದರಲ್ಲೂ ಕೃಷಿ ಸಂಸ್ಕೃತಿಯಲ್ಲಿ ಬೆಳೆಯುತ್ತಿರುವ ಮಕ್ಕಳು, ಪ್ರತಿಯೊಂದು ಕ್ಷೇತ್ರದಲ್ಲಿಯೂ ತಾವುಗಳು, ವಿದ್ಯಾರ್ಥಿಯಾಗಿ, ಅಧಿಕಾರಿಯಾಗಿ, ಡಾಕ್ಟರ್, ಪೋಲಿಸ್, ಕಂಡಕ್ಟರ್, ಡ್ರೆöÊವರ್, ಇದಲ್ಲದೆ ಮದುವೆಯಾಗಬೇಕೆಂಬ ನೈಜತೆಯ ಬದುಕು; ವಾಸ್ತವದಲ್ಲಿ ಮಕ್ಕಳ ಮೂಲಕ ಅವರು ಆಡುವ ಆಟದ ಸ್ವರೂಪಲ್ಲಿ ಶಿಕ್ಷಣದ ಹೆಬ್ಬಯಕೆ ಕೃಷಿಕರ, ಚಿಕ್ಕ ಮಕ್ಕಳಲ್ಲಿ ಕಲಿಯುವ ಹಂಬಲ ತಾಂಡವವಾಡುತ್ತಿದೆ. ಆ ರೂಪದಲ್ಲಾದರೂ ಮನೆ ಕಟ್ಟುವ ಆಕಾಂಕ್ಷೆ, ದೊಡ್ಡ ವ್ಯಾಪಾರಿಯಾಗಬೇಕೆಂಬ ಶಿಕ್ಷಣದ ಅರಿವು ಕೃಷಿಕರನ್ನು ಎಚ್ಚರಿಸುತ್ತಿದೆ. ಹೀಗೆ ಮುಂತಾದ ದೊಡ್ಡ ದೊಡ್ಡ ಕನಸುಗಳನ್ನು ಹೊತ್ತು ಕೃಷಿಕರು ತಮ್ಮ ಭೂಮಿಯ ಒಡಲಿನ ಬೇಗುದಿಯಲ್ಲಿ ಬೆಯ್ಯುತ್ತಿರುವ ಅಕ್ಷರದ ಬದುಕನ್ನ ಕೃಷಿಕರು ಶಿಕ್ಷಣದಿಂದಲೆ ಕಟ್ಟಿಕೊಳ್ಳುವ ಪರಿಕಲ್ಪನೆ ಮಕ್ಕಳ ನಾಲಿಗೆಯಲ್ಲಿ ಆಡಿಸುತ್ತಿದೆ. ಆ ಭೂಮಿಯ ಗರ್ಭದ ಸೃಷ್ಟಿಯಲ್ಲಿ ಬೆಳೆಯುತ್ತಿರುವ ಮಕ್ಕಳು ಪ್ರತಿಯೊಂದು ಕ್ಷೇತ್ರದಲ್ಲಿ ತಾವು ಇದ್ದು ಆಯಾ ಕ್ಷೇತ್ರಗಳ ಹಲವಾರು ವೃತ್ತಿಯ ಒಡನಾಟ ಅನುಭವಿಸುವ ಮಕ್ಕಳ ಆಸೆ ಕೇವಲ ಸ್ವಪ್ನದ ಪರಿಕಲ್ಪನೆಯಲ್ಲಿಯೇ ಅನುಭವಿಸುವಂತದ್ದು ಶೋಚನೀಯ ಸಂಗತಿ. ಅದು ಮಕ್ಕಳ ಪರಿಕಲ್ಪನೆಯಲ್ಲಿ ಶಿಕ್ಷಣವು ಸಹ ಒಂದು ಆಗೋಚರವಾಗಿಯೇ ಅವರಿಗೆ ಕಾಣುತ್ತದೆ. ಈ ಕತೆಯಲ್ಲಿ ಕಾಣಿಸುವ ಮತ್ತೊಂದು ಪರಿಕಲ್ಪನೆ ಮಾಸ್ತರರ ಹೆಂಡತಿ "ಸುಮಂಗಲೆ" ಇವಳು "ಊರ ಹುಡುಗಿಯರಿಗೆ ಕಸೂತಿ ಕಲೆ, ಹೆಣಿಕೆ ಕಲಿಸುವಳು. ಬೇಸಿಗೆ ಬಂದರೆ ಇವಳಿಗೆ ಬಿಡುವೇ ಇರುವುದಿಲ್ಲ" ಕಾರಣ "ಹಪ್ಪಳ, ಸಂಡಿಗೆ, ಮಸಾಲೆ ಮಾಡುವುದರಲ್ಲಿ ಎಲ್ಲರಿಗೂ ನೆರವಾಗುವಳು" ಇನ್ನೂ ಮಗಳು "ಸಾವಿತ್ರಿ" ಗಂಡನ ಮನೆಯಲ್ಲಿ "ಕೈಯಂತ್ರದAತೆ ಕೆಲಸಮಾಡಹತ್ತಿವೆ" ಇಂತಹ ಒಂದು ಕಲಿಕೆಯ ಪರಿಕಲ್ಪನೆ ಶಿಕ್ಷಣದಿಂದಲೇ ಕಲಿತದ್ದಲ್ಲ. ಅದು ಕೃಷಿಕರ ಬೌದ್ಧಿಕತೆಯ ಅನುಭವದ ಮೂಲ. ಜ್ಞಾನದ ಬಲದ ಅರಿವಿನ ಮೂಲಕ ಸ್ವತಃ ಕಲಿತಂಥಹ ಶಿಕ್ಷಣ, ಜೀವನದ ಶಿಕ್ಷಣ. ಈ ಶಿಕ್ಷಣವನ್ನು ಯಾವ ಶಾಲಾ-ಕಾಲೇಜು, ವಿಶ್ವವಿದ್ಯಾಲಯಗಳು ಕೊಡಲು ಸಾದ್ಯವಿಲ್ಲದ್ದು.

ಶಿಕ್ಷಣ ಕಲಿಸುವ ಗುರುವಿನ ಮಗಳು ರೈತಳಾದಾಗ : ಶಿಕ್ಷಣ ಕಲಿಸುವ ಗುರು ವಿದ್ಯಾರ್ಥಿಗಳ, ಭವಿಷ್ಯವನ್ನು ರೂಪಿಸುವ ತತ್ವಜ್ಞಾನಿ; ಹಾಗೂ ಮಕ್ಕಳಿಗೆ ಆದರ್ಶ ವ್ಯಕ್ತಿ. ವಿದ್ಯಾರ್ಥಿಗಳಲ್ಲಿನ ಮೌಢ್ಯತೆ ಕಳೆದು ವೈಚಾರಿಕತೆಯೆಡೆಗೆ ಕೊಂಡೊಯ್ಯುವ ದಾರಿದೀಪ ಎಂದರೆ ಶಿಕ್ಷಕ. ಶಿಕ್ಷಣದ ಪರಿಕಲ್ಪನೆಯ ಮೊದಲ ಉದ್ದೇಶ ಸಮಾಜದಲ್ಲಿ ಆದರ್ಶ ವ್ಯಕ್ತಿಗಳನ್ನಾಗಿ ಮಕ್ಕಳನ್ನು ರೂಪಿಸುವುದು. ಅದರ ಹೊಣೆ ಮಾರ್ಗದರ್ಶಕರು ಎನಿಸಿದ, ಅಕ್ಷರ ಕಲಿಸುವ ಗುರುಗಳದ್ದು. ಶಿಕ್ಷಣ ಕಲಿಸುವ ಮಾಸ್ತರ "ತೊಟ್ಟಲು ತೂಗಲಿಲ್ಲ" ಎಂಬ ಕತೆಯಲ್ಲಿ ತನ್ನ ಮಗಳು 'ಸಾವಿತ್ರಿ' ಯನ್ನು ಕೃಷಿ ಕುಟುಂಬದವನಿಗೆ ಮದುವೆ ಮಾಡಿ ಗಂಡನ ಮನೆಗೆ ಕಳುಯಿಸುವುದು. ಅಲ್ಲಿ ಅವಳ ಜೀವನ ಕೃಷಿಯೇ ಆಧಾರ ಸ್ಥಂಭವಾದರೂ ಬದುಕಿನ ವ್ಯವಸ್ಥೆಯಲ್ಲಿ ಸಿಲುಕಿ "ವರದಕ್ಷಿಣೆ" ಎಂಬ ಮಾರಕ ಅಸ್ತ್ರಕ್ಕೆ ಬಲಿಯಾಗುವುದು ಅಸಂಗತ ಸಂಗತಿ. ಈ ವೇಧನೆಯ ಅಳಲು ದುಃಖದಲ್ಲಿಯೆ ಅಂತ್ಯವಾಗುತ್ತದೆ. ತನ್ನ ತಂದೆ ಶಿಕ್ಷಕರಾದರೂ, ಕೃಷಿ ಸಂಸ್ಕೃತಿಯಲ್ಲಿ ಬೆಳೆದರೂ, ಶಿಕ್ಷಣದ ಕೊರತೆಯ ಅಂಧಕಾರದಲ್ಲಿ ಹೆಣ್ಣು ಶೋಷಣೆಗೊಳಪಡುವುದು; ಕ್ರೌರ್ಯದ ವಿರುದ್ಧ ಧ್ವನಿ ಎತ್ತುವುದು. ಇನ್ನೊಂದೆಡೆ ಹಣದ ದುರಾಸೆಯಿಂದ ಮಾನವೀಯತೆ ಮರೆತ ಗಂಡಿನ ಅಹಂಕಾರ, ಹಣದ ವ್ಯಾಮೋಹದಿಂದ ಹೆಣ್ಣಿನ ಬದುಕನ್ನೆ ಕತ್ತಲು ಮಾಡಿಬಿಡುತ್ತದೆ; ಎಂಬುದಕ್ಕೆ ಈ ಕತೆಯೇ ಸಾಕ್ಷಿ. ಕೇವಲ "ಹತ್ತುಸಾವಿರ" ವರದಕ್ಷಿಣೆಯ ತರದ ಸಾವಿತ್ರಿಯು ಜೀತದಂತೆ ಗಂಡನ ಮನೆಯಲ್ಲಿ ಕೆಲಸ ಮಾಡುವಳು. ಸೂರ್ಯಉದಯಕ್ಕೂ ಮುಂಚೆ "ಕಸಮುಸುರೆ, ಶಗಣಿ ಬಳಿಯುವಳು. ಎಮ್ಮೆಗಳನ್ನು ಹಿಂಡಿ ಮಜ್ಜಿಗೆ ಕಡೆದು ಬುಟ್ಟಿಯ ರೊಟ್ಟಿಯ ಮಾಡಿ ಹೊಲಕ್ಕೆ ನಡೆದಿರುವಳು" ಶಿಕ್ಷಣ ಕಲಿತರು ತಂದೆ ಪಾಠಹೇಳಿ ಕೊಡುವ ಗುರುಗಳು; ಈ ಇಡೀ ಕುಟುಂಬವೇ ಶಿಕ್ಷಣದ ಅಭಿವೃದ್ಧಿಗಾಗಿ ದುಡಿಯುತ್ತಿದೆ. ಈ ಮನೆತನದಲ್ಲಿ ಬೆಳೆದ ಹೆಣ್ಣು ಶಿಕ್ಷಣ ವ್ಯವಸ್ಥೆಯಲ್ಲಿ ಅಭಿವೃದ್ಧಿ ಹೊಂದಿದ ಮನೆಯಿಂದ ಬಂದವಳ ಬದುಕು ಇಂದು ಹೆಣವಾಗಿ ಗಂಡನ ಬೆಂಕಿಜ್ವಾಲೆಯಲ್ಲಿ "ಬಸರೆಂಗಸು ವಿಲವಿಲ ಒದ್ದಾಡ ಹತ್ತಿತು. ಕೋಣೆಯ ಬಾಗಿಲು ಮುಚ್ಚಿಕೊಂಡು ಬೆಂದ ಬಸಿರಿಂದ ಮಗು ಹೊರಬರಲುಪ್ರಯತ್ನಿಸಹತ್ತಿದೆ". ಹೊರಬರುವ ಪ್ರಯತ್ನದ ಕಲಿಕೆಯಲ್ಲಿ ಆ ಮಗು ಹೊರಜಗತ್ತನ್ನು ನೋಡುವ ಕಣ್ಣುಗಳು; ಹಸುಳೆಯ ಹಸಿಮಾಂಸದಲ್ಲಿಯೇ ಶಾಶ್ವತವಾಗಿ ಕಣ್ಣುಮುಚ್ಚಿಕೊಂಡಿದೆ. ಆ ಅನ್ಯಾಯದ ಕ್ರೌರ್ಯವನ್ನು ಪ್ರತಿಭಟಿಸುವ ಹೋರಾಟದ ಪ್ರತಿಫಲ ದೊರಕದೆ ಮುದ್ದೆಯಂತಹ ಮಾಂಸದಲ್ಲೆ ಹಸುನೀಗಿತು. ಹೀಗೆ ಪ್ರತಿಭಟನಾತ್ಮಕ ಹೊರಬರುವ ಕಲಿಕೆ ಶಿಕ್ಷಣದಲ್ಲಿ ಅನುಭವದ ಪ್ರತೀಕವೆಂದು; ತಾನು ಸತ್ತರೂ ಬದುಕಿನ ಹೋರಾಟದ ಶಿಕ್ಷಣ ಮುಂದಿನ ಪೀಳಿಗೆಗೆ ಸಾಕ್ಷೀಯಾಗಿವೆ. ಆ ಮಗುವನ್ನು ಬೆಳೆಯುವ ಮೊಳಕೆಯಲ್ಲೆ ಚೂಟಿದಂತೆ. ಆದರೂ ಆ ಮಗು ಕಲಿಕೆಯ ಜೀವನದ ಶಿಕ್ಷಣ ಮರೆತಿಲ್ಲವೆನ್ನುವುದೆ ಸೋಜಿಗ. ಸತ್ತರೂ ಕಲಿಯುತ್ತಿದ್ದೇನೆ ಎಂಬ ಸ್ವಾಭಿಮಾನ, ಸೋಲು, ಸಾವಿನ ಹಂಚಿನಲ್ಲಿಯೂ ತಾಯಿಗರ್ಭದಿಂದ ಹೊರಬರುವ ಪ್ರಯತ್ನವೇ ಶಿಕ್ಷಣಕ್ಕೆ ಬುನಾದಿ ಎಂಬ ಅರ್ಥವನ್ನು ಕೃಷಿಕರನ್ನು ಮನದಟ್ಟು ಮಾಡಿಸುತ್ತಿದೆ. ಕೃಷಿ ಸಂಸ್ಕೃತಿಯ ಮೇಲೆ ಪ್ರಭಾವಬೀರುವ ಸೂಕ್ಷ್ಮತೆಯ ಬಿಕ್ಕಟ್ಟುಗಳು ಕತೆಗಳಲ್ಲಿ ಮುಂಬತ್ತಿಯ ದೀಪದ ಹಾಗೆ ಹೊರಹಾಕಿವೆ. ಆ ಬತ್ತಿ ಸುಡುವತನಕ ಅದರ ಬೆಳಕು. ಅದರ ಮೌಲ್ಯ ಅಷ್ಟೇ. ಕಾರಣ ಶಿಕ್ಷಣ ಪಡೆದು ವೃತ್ತಿಯಲ್ಲಿದ್ದು ಅನಕ್ಷರಸ್ಥರಂತೆ ವರ್ತಿಸುವ ಶ್ರೀಮಂತರ ಬೌದ್ಧಿಕತೆ ಕೃಷಿಕರ ಕಲಿಕೆಯ ಮೇಲೆ ಪರಿಣಾಮ ಬೀರುತ್ತವೆ. ಕೃಷಿಕರು ಶಿಕ್ಷಣ ಕಲಿಯಲಿಕ್ಕೆ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಿದೆ. ಅವು ಕತೆಗಳಲ್ಲಿ ಒಂದೊAದಾಗಿ ವಿಚಾರ ವಿನಿಮಯ ಮಾಡಿಕೊಂಡಿವೆ. ಕೂಲಿಕಾರ್ಮಿಕರ ಅಸಹಾಯಕತೆ, ಆ ಅಸಹಾಯಕತೆಯನ್ನೇ ಉಪಯೋಗಿಸಿಕೊಳ್ಳುವ ಉಳ್ಳವರ ಚಪಲ, ಅಸಾಹಯಕ ಕೃಷಿ ಹೆಣ್ಣಿನ ಮೇಲೆ ನಡೆಸುವ ತಮ್ಮ ತೃಷೆಯ ದಾಹದ ಹಸಿವನ್ನು ಬಲತ್ಕಾರದಿಂದ ಉಣಬಡಿಸಿಕೊಳ್ಳುವುದು. ಇದು ಸಾವಿನ ಹಂಚಿನಲ್ಲಿ ಕೊನೆಗಾಣುವುದು.

ಕೃಷಿಕರಿಗೆ ಎದುರಾಗುವ ಸಮಸ್ಯೆ ಸವಾಲೇನಿಸಿದಾಗ: ಆಧುನಿಕ ಇಂಜಿನಿಯರಿAಗ್ ಮತ್ತು ಕಂಟ್ರಾಕ್ಟರ್‌ವರ್ಗಗಳು ಕೃಷಿಕರ ಬಡವರ ಮನೆಗಳನ್ನು ಕಟ್ಟಿಸಿಕೊಡುವ ನೆಪದಲ್ಲಿ ಕೃಷಿಕರಿಗೆ ಬಂದAಥಹ ಹಣವನ್ನು ಲಪಟಾಯಿಸುವುದು ಇಂದಿಗೂ ವಾಸ್ತವದಲ್ಲಿ ಕಂಡುಬರುತ್ತದೆ. ಈ ಮೇಲಿನ ಸಮಸ್ಯೆಗಳನ್ನು ಎದುರಿಸಿ ಶಿಕ್ಷಣಪಡೆಯುವ ದೃಢಸಂಕಲ್ಪ ಕೃಷಿಕರು ಮಾಡಬೇಕು. ಶಿಕ್ಷಣ ಪಡೆದರೂ ಅನ್ನಕೊಡುವ ಭೂಮಿಮರೆತು ಸಿಟಿಗೆ ಹೋಗಿ ಅನ್ನಕ್ಕಾಗಿಯೇ ಅಲೆದಾಡುವ ಚಿಂತಾಜನಕ ಸ್ಥಿತಿ ಕೃಷಿಕರದ್ದಾಗಿದೆ. ಈ ಸಮಸ್ಯೆಗಳು ಕೃಷಿಕರ ಶಿಕ್ಷಣದ ಸಾಧ್ಯತೆಗಳೋ ಅಥವಾ ಸಮಸ್ಯೆಗಳೊ ಎಂಬ ಪ್ರಶ್ನೆ ನಮ್ಮನ್ನು ಕಾಡಹತ್ತಿದೆ.

ಶಿಕ್ಷಣಕ್ಕೆ ಹೆದ್ದಾರಿ ಹೆಣ್ಣಿನ ಪ್ರತಿರೋಧ ಹಾಗೂ ಪ್ರತಿಭಟನೆ: ಬಂಡಾಯದ ಪ್ರತಿರೋಧ ಮುಂದಿನ ಪೀಳಿಗೆಯ ಹೋರಾಟದ ಅರಿವಿನ ಪ್ರಜ್ಞೆ, ಜ್ಞಾನದ ಹರವು ಎಂದು ಭಾವಿಸಬೇಕಿದೆ? ಎಂಬುದು ಯಕ್ಷಪ್ರಶ್ನೆಯಾಗಿದೆ. "ಆದರೆ ದೇಸೀ ಸಂಸ್ಕೃತಿ, ದೇಸಿ ಜ್ಞಾನಪರಂಪರೆ, ಹಾಗೂ ಪರಿಸರದ ಸಾಹಿತ್ಯಕ್ಕೆ ಎದುರಾಗಿರುವ ಬಹುದೊಡ್ಡ ಬೆದರಿಕೆ. ಇದನ್ನೆಲ್ಲಾ ಪ್ರತಿರೋಧಿಸುವ ಶಕ್ತಿ, ಸಾಮರ್ಥ್ಯ ಈ ದೇಸೀ ಮೂಲಕಲೆ, ಸಾಹಿತ್ಯ, ಭಾಷೆ, ಸಂಸ್ಕೃತಿ,

ಶಿಕ್ಷಣ ಮಾಧ್ಯಮಗಳಿಗೆ ಖಂಡಿತ ಇದೆ" "ದೃಷ್ಟಾಂತಕ್ಕೆ ಹೇಳುವುದಾದರೆ, ಒಬ್ಬ ಕಾರ್ಖಾನೆಯ ಕಾರ್ಮಿಕ ಮತ್ತು ಕೃಷಿಕಾರ್ಮಿಕ ಇಬ್ಬರೂ ಶೋಷಿತರು. ಈ ವ್ಯವಸ್ಥೆ ಆರೋಗ್ಯ ತುಕ್ಕು ಹಿಡಿದಹಾಗೆಲ್ಲಾ ನಗರ ಕಾರ್ಮಿಕನ ಮಜೂರಿ ಹೆಚ್ಚುತ್ತಾ ಹೋಗುತ್ತದೆ. ಈ ಸಂದರ್ಭದಲ್ಲಿ ಕೃಷಿ ಕಾರ್ಮಿಕ ಹೆಚ್ಚು ದರಿದ್ರನಾಗುತ್ತಾ ಹೋಗುತ್ತಾನೆ. ಈ ಧರಿದ್ರತನ ಹೋಗಲಾಡಿಸಲು ಹೆಣ್ಣಿನ ಶಕ್ತಿ ಈ ಸಂದರ್ಭದಲ್ಲಿ ಬಹುಮುಖ್ಯವೆನಿಸುತ್ತಿದೆ.

ಕೃಷಿಕರಲ್ಲಿ ಹಿರಿಯರು ಅನುಭವಿಸಿದ ನೋವು ಮತ್ತು ನಗರೀಕರಣದ ಪ್ರಭಾವ: ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಕರಕುಶಲಕಲೆಗಳ "ಗತವೈಭವದ ಕುಲಕಸಬನ್ನು ಉಳಿಸಿಕೊಳ್ಳಲು ಕೃಷಿಕರು ಹೆಣಗುತ್ತಿದ್ದಾರೆ" ಇದರ ಹಿಂದೇಟಿಗೆ ಕಾರಣ ನಗರೀಕರಣ. ಇಂದು ವಿದ್ಯಾವಂತ ಕೃಷಿಜನಾಂಗವು ಒಟ್ಟಿಗೆ ಬಣ್ಣಕಟ್ಟುವ ಕುಲಕಸುಬನ್ನ ಮುಂದುವರಿಸಲು ನಿರಾಸಕ್ತವಾಗಿದೆ" ಪ್ರಧಾನ ಕಾರಣ ಹಿರಿಯರು ಅನುಭವಿಸಿದ ಬದುಕಿನ ಬಡತನದ ಭವಣೆ. ಜೀವನದುದ್ದಕ್ಕೂ ಏಳುಬೀಳುಗಳು, ಮುಖಭಂಗ, ಅಪಹಾಸ್ಯ ಮುಂತಾದವುಗಳನ್ನು ಸಹಿಸಿಕೊಂಡು ಹೋರಾಡಿದ ಹೆಜ್ಜೆಗುರುತುಗಳು ಇವತ್ತಿನ ವಿದ್ಯಾವಂತರ ಜ್ಞಾನದ ಅರಿವಿನ ಮಸ್ತಕದಲ್ಲಿ ಬೇರೂರಿನಿಂತಿವೆ. ಆದುದರಿಂದ ಕೃಷಿಕರ ಕುಶಲಕಲೆಯಂತಹ ವೃತ್ತಿ 'ಯುವ' ಜನಾಂಗಕ್ಕೆ ಬೇಡವಾಗಿದೆ. ಅದರಲ್ಲೂ ಕರಕುಶಲ ಕಲೆ ಬಹುದೂರ ಉಳಿದಿದೆ. ಇನ್ನೂ "ಕೃಷಿ"ಯು ಪ್ರತಿಯೊಂದು ಜೀವರಾಶಿಗೂ ಆಧಾರಸ್ಥಂಭ. ಆ ಕೃಷಿ ಭೂಮಿಯೇ ಇಂದು ಕ್ಷೀಣಿಸುತ್ತಿದೆ. ಕಾರಣ ನಗರೀಕರಣ, ಕೈಗಾರಿಕೆಗಳು, ದೊಡ್ಡದೊಡ್ಡ ಕಟ್ಟಡಗಳು, ಕಾಂಪ್ಲೆಕ್ಸ್, ಮುಂತಾದವುಗಳು ಉದ್ಧಿಮೆಯಾಗಿ ಬೆಳೆಯುತ್ತಿವೆ. ಭೂಮಿಯ ವ್ಯಾಪಾರೀಕರಣದಿಂದ ದೇಶವು ಅಭಿವೃದ್ಧಿಪಥದತ್ತ ದಾಪುಗಾಲು ಹಾಕಿದೆ. ಕೃಷಿಕರಲ್ಲದ ಶ್ರೀಮಂತರ ಬೃಹತ್ ಉದ್ದಿಮೆದಾರರ ಕಂಪನಿಗಳು ತಯಾರಿಸುವ ಮತ್ತು ಸರಬರಾಜು ಆಗುತ್ತಿರುವ ಬೀಜ, ಗೊಬ್ಬರ, ಕ್ರಿಮಿನಾಶಕಗಳ ಮೌಲ್ಯವು ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಬೆಲೆ ನೀಡುತ್ತಿಲ್ಲ. ಈ ಮೌಲ್ಯದ ಕುಸಿತದ ಮೋಸದ ಬಲೆಯನ್ನು ಹೆಣೆಯುತ್ತಿರುವ ಬಹುಕಂಪನಿಗಳ ದೂರ್ತತನ ಒಂದೆಡೆಯಾದರೆ, ದಲ್ಲಾಳಿಗಳ ವಿಷವರ್ತುಲ ಇನ್ನೊಂದೆಡೆ ಕೃಷಿಕರನ್ನು ಮಾನಸಿಕವಾಗಿ ಕುಗ್ಗಿಸುತ್ತಿವೆ. ಇವೆಲ್ಲವುಗಳ ತಿಳುವಳಿಕೆ ಮೂಡಬೇಕಾದರೆ ಶಿಕ್ಷಣದ ಅಗತ್ಯತೆ ಬಹುಮುಖ್ಯ.

ಸ್ವಾಯತ್ತದ ಶಿಕ್ಷಣದ ಕಲಿಕೆ: ಮೊಗಳ್ಳಿ ಗಣೇಶ್ ಅವರ 'ಭೂಮಿ' ಕತೆಯಲ್ಲಿ ದೊಂಬನ ದೊಂಬರಾಟದ ಯಾಂತ್ರಿಕ ಮೋಡಿ ಕಲೆ ಶಿಕ್ಷಣಕ್ಕಿಂತ ಅರಿತವಾದ ನೈತಿಕ ಕಲೆ. ಮೋಡಿವಿದ್ಯೆಯ ಕಲೆಯೇ ದೊಂಬನ ಬದುಕು. ಈ ಕಲೆಯಿಂದ ಜನರನ್ನು ನಗಿಸುವ ಮೆಚ್ಚಿಸುವ, ತಮ್ಮತ್ತ ಗಮನಹರಿಸುವ ಸೂಕ್ಷ್ಮಂ್ಮತೆ ಮತ್ತು ಚತುರತೆ ಈ ಕಥೆಯಲ್ಲಿದೆ. ಈ ಜಾದುವಿನ ಮೂಲಕವೇ ಗೌಡನ ಭೂಮಿಯನ್ನು ಪಡೆದುಕೊಳ್ಳುವ ಆಶಯ. ಭೂತಾಯಿಯ ಎದೆಹಾಲು ಉಣ್ಣುವ ಮಗನ ಆಶಯ ಅದು ಶಿಕ್ಷಣ ಕಲಿಕೆಯ ಜಾದುವಿದ್ದಂತೆ ಬದುಕಲು ಕಲಿಯುವ ಕಲಾತ್ಮಕ ಶಿಕ್ಷಣವೇ ಕೃಷಿಕ ಭೂಮಿಯನ್ನು ಉಳಿಸಿಕೊಳ್ಳಲು ಸಾದ್ಯ. ಕೃಷಿಕ ಶಿಕ್ಷಣ ಕಲಿಯದೆ ಇದ್ದರು ಭೂಮಿಯನ್ನು ಹದಮಾಡುವ, ಬಿತ್ತುವ, ಕಳೆತೆಗೆಯುವ, ಬೆಳೆಯುವ, ಕಟಾವು ಮಾಡುವ, ಕೊನೆಗೆ ಕಣದಲ್ಲಿ ರಾಶಿಮಾಡುವ ಕಲೆ ಕೃಷಿಕರ ಆಲೋಚನೆಗೆ ಸಂಬAಧಿಸಿದ್ದು. ಈ ಆಲೋಚನೆಯ ಅರಿವು ಮೂಡಿಸಲು ಯಾವ ಗುರುಗಳಿಂದಲೂ ಶಿಕ್ಷಣ ಒದಗಿಸಲು ಸಾದ್ಯವಿಲ್ಲ. ಈ ಕಲಿಕೆಯು ಕೃಷಿಕರು ಬೆಳೆಯುತ್ತಿರುವ ಪರಿಸರ, ಕುಟುಂಬದ ವ್ಯವಸ್ಥೆಯಿಂದಲೇ ಬೆಳೆದುಬಂದಿದೆ, ಬೆಳೆಯುತ್ತಿದೆ. ಜ್ಞಾನದ ಹಸಿವು ಪ್ರತಿಯೊಬ್ಬರ ಬದುಕನ್ನು ರೂಪಿಸುತ್ತಿದೆ. ಅದರಲ್ಲೂ ಕೃಷಿಕರ ಜ್ಞಾನದ ಶಕ್ತಿ ಅಪಾರವಾದುದು. ಕೃಷಿಕರು ಅನುಭವಿಸಿ ಕಲಿತ, ಕಟ್ಟಿಕೊಂಡ ಶಿಕ್ಷಣವನ್ನು ಔಪಚಾರಿಕವಾಗಿ ನಾಲ್ಕುಗೋಡೆಯ ಒಳಗೆ ಕಲಿತ ಶಿಕ್ಷಣಕ್ಕಿಂತಲೂ ಮಿಗಿಲಾದುದ್ದೆ. ಔಪಚಾರಿಕ ಶಿಕ್ಷಣದ ಕಲಿಕೆಗಿಂತಲೂ ಅನೌಪಚಾರಿಕ ಶಿಕ್ಷಣದ ಪರಿಕಲ್ಪನೆ ತುಂಬಾ ವಿಸ್ತಾರವಾದುದು. ಔಪಚಾರಿಕ ಶಿಕ್ಷಣದ ವ್ಯಾಪ್ತಿ ಒಂದು ವ್ಯವಸ್ಥೆಯ ಅಡಿಯಲ್ಲಿ ಶಿಕ್ಷಣ ಕಲಿಯುವಂತದ್ದು. ಇದು ಕೃಷಿಕರ ಬೌದ್ಧಿಕತೆಗೆ ಎಟುಕದ್ದು. ಕೃಷಿ ಶಿಕ್ಷಣ ಕೃಷಿಕರ ಏಳ್ಗೆ ಬಯಸುವಂತದ್ದು. ಆದರೆ ವ್ಯವಸ್ಥೆಯ ಶಿಕ್ಷಣ ಅಧಿಕಾರಿಗಳು ಹೇಳಿದಂತೆ ಕೇಳುವ ಒಂದು ನಿರ್ಧಿಷ್ಟತೆ ಎದುರಾಗುವುದು. ಇದು ಕೃಷಿಕರ ಬದುಕಿನ ಮೇಲೆ ಕೃಷಿಕರ ಮಕ್ಕಳ ಕಲಿಕೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬ ಪ್ರಶ್ನೆ ಹಾಗೆಯೇ ಮರೆಮಾಚಿದೆ. ಅದರ ಮರೆಯಲ್ಲಿ ಸ್ವಾಯತ್ತದ ಕಲಿಕೆಗೆ ಅನೌಪಚಾರಿಕ ಶಿಕ್ಷಣದ ಅಗತ್ಯವೇ ಹೆಚ್ಚು.

ಬದುಕುವುದಕ್ಕೆ ವೃತ್ತಿ ಯಾವುದಾದರೇನು?: ಅಮರೇಶ ನುಗಡೋಣಿಯವರ "ದಾರಿಮೂಡಿಸುವ ಹೆಜ್ಜೆಗಳು' ಎಂಬಕತೆಯಲ್ಲಿ "ತಿಮ್ಮಕ್ಕ" ಶಿಕ್ಷಣ ಕಲಿತವಳಲ್ಲ. ಕಲಿತವರೆಲ್ಲರೂ ಒಳ್ಳೆಯ ವೃತ್ತಿಪಡೆದು ಬದುಕಲು ಹರಸಾಹಸವೇ ಪಡಬೇಕು. "ನನಹಾಟ್ಯಲೋ ಬೀರ, ಮೆಟ್ರೀಕು ಓದಿದ್ದು ಹೆಂಡದದAಗಡಿ ಇಡಕೇನು? "ಅಲ್ಲ ಬದುಕಾಕ ಹೋಗಿ ಹೋಗಿ ಹೆಂಡ ಮಾರಿ ಊರಾಗಿನ ಮಂದಿನ್ನ ದೀವಾಳಿ ಮಾಡ್ತಿದ್ದಿ ನೋಡು ಬ್ಯಾರೆ ಕೆಲಸ ಇದ್ದಿಲ್ಲೇನು ಬದುಕಾಕ"? ಕೃಷಿ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದ ಬೀರ ಶಿಕ್ಷಣದಲ್ಲಿ ಪದವಿ ಪಡೆದಿದ್ದಾನೆ. ಉತ್ತಮ ಕೆಲಸ ಸಿಗದೆ ಬದುಕಿಗಾಗಿ ಹೆಂಡದದAಗಡಿ ವ್ಯಾಪಾರದ ವೃತ್ತಿಗೆ

ಮೊರೆ ಹೋಗಿದ್ದಾನೆ. ಕಲಿತವರೆಲ್ಲರಿಗೂ ಸರಕಾರಿ ನೌಕರಿ ಸಿಗಬೇಕೆಂದು ಇಲ್ಲ. ದುಡಿಯುವುದಕ್ಕೆ ಯಾವ ಕೆಲಸವಾದರೆನು ಒಟ್ಟಿನಲ್ಲಿ ಹಸಿದವನಿಗೆ ಅನ್ನ ಮುಖ್ಯ.

ಕೃಷಿಕರು ಅಳವಡಿಸಿಕೊಂಡಿರುವ ವೈಚಾರಿಕ ತತ್ವಗಳು: ಅಮರೇಶ ನುಗಡೋಣಿಯವರ "ತಮಂಧದ ಕೇಡು" ಕತೆಯಲ್ಲಿ ಬರುವ "ಸಿದ್ದಪ್ಪ" "ಹೊಲದಲ್ಲಿ ಗುಡಿಸಲು ಹಾಕಿಕೊಂಡು ವ್ಯವಸಾಯ ಮಾಡುತ್ತಿದ್ದನು. ಆತ, ಪದವಿ ಮುಗಿಸಿದ್ದರೂ ಊರಲ್ಲಿಯೇ ಇದ್ದ. "ನಿಂಗ, ಕೆಂಪುಗ"ನಾದಿಯಾಗಿ ಪುರುಷೋತ್ತಮ, ಶಿವಲಿಂಗ, ನಾಗರಾಜ, ಸುದರ್ಶನ, ಶಿವರಾಜ ಎಲ್ಲರೂ ಸಿದ್ದಪ್ಪನ ಪ್ರೋತ್ಸಹದಿಂದ ಕಲಿತವರು. ಬಸವಣ್ಣನ ವೈಚಾರಿಕತೆಯ ತತ್ವಗಳನ್ನು ರೂಢಿಸಿಕೊಂಡು ತಾನು ಕಲಿತ ಶಿಕ್ಷಣವನ್ನು ತನ್ನನ್ನು ನಂಬಿದವರಿಗೆ ಹೇಳುವ ನಿಲುವು ಹೊಂದಿದ್ದನು. "ಆತನ ವಿಚಾರದಲ್ಲಿ ಬುದ್ಧ, ಬಸವ, ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ ಅವರೆಲ್ಲರ ತತ್ವಗಳು" ಕರಗತಮಾಡಿಕೊಂಡು ಯುವಕರಲ್ಲಿ ವೈಚಾರಿಕತೆ ಪ್ರಜ್ಞೆ ಮೂಡಿಸುತ್ತಿದ್ದನು. ಅಂಬೇಡ್ಕರ್ ವಿಚಾರಗಳು ಪ್ರತಿಯೊಬ್ಬ ವ್ಯಕ್ತಿಯೂ ಅಳವಡಿಸಿಕೊಳ್ಳಬೇಕು. ಜಾತಿ ದೃಷ್ಟಿಯಿಂದ ಅವರ ವಿಚಾರಗಳನ್ನು ನೋಡುವುದು ಸರಿಯಲ್ಲ. ಸಮಾಜದ ದೃಷ್ಟಿಯಿಂದ ವೈಜ್ಞಾನಿಕ ಮನೋಧರ್ಮದ, ಸಮಾಜದ ಹಿತಕ್ಕಾಗಿ, ಕೃಷಿಕರ ಅಭಿವೃದ್ಧಿಯ ದೃಷ್ಟಿಯಲ್ಲಿ ನೋಡುವುದು ಒಳಿತು. ವ್ಯಕ್ತಿಯಾಗಿ ನೋಡುವುದಕ್ಕಿಂತ ಸಮಾಜದ ಶಕ್ತಿಯಾಗಿ ನೋಡುವುದು. ಅವರ ಆದರ್ಶ, ಅಪಾರ ಜ್ಞಾನದ ಅರಿವು ಬಡವರು, ಹಿಂದುಳಿದವರು, ಕೃಷಿಕರು ಅಳವಡಿಸಿಕೊಂಡಿದ್ದಾರೆ. ಜಾತಿವ್ಯವಸ್ಥೆಯ ಅಡಿಯಲ್ಲಿ ಸಿಲುಕಿದವರು ಅಂಬೇಡ್ಕರ್. ಅಂಬೇಡ್ಕರ್ ಅವರ ಮೂರ್ತಿಯನ್ನು ಯಾವ ಕೇರಿಯಲ್ಲಿ ಕುಂದ್ರಿಸಬೇಕೆAಬ ಸಮಸ್ಯೆಗೆ "ಸಿದ್ದಪ್ಪ" ಹೀಗೆ ಉತ್ತರಿಸುತ್ತಾನೆ. "ನನ್ಗ ಅಂಬೇಡ್ಕರ್ ನಿಮ್ಮವ ಅಂತ ಅನಸಂಗಿಲ್ಲ" ಆತನ ವಿಚಾರಗಳು ಮಾನವ ಕುಲಕ್ಕೆ ಬೇಕು. ಗ್ರಾಮ, ನಗರಗಳ ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣವು ಅಂತರಾಷ್ಟ್ರೀÃಯ ಮಟ್ಟದಲ್ಲಿ ಉನ್ನತೀಕರಿಸಬೇಕು.

ಬಿಕ್ಕಟ್ಟಿನ ಸುಳಿಯಲ್ಲಿ ಕೃಷಿ ಕ್ಷೇತ್ರ: ಇಂದು ಹಲವು ಕ್ಷೇತ್ರದಲ್ಲಿ ದುಡಿಯುತ್ತಿರುವ "ಬಹುತೇಕರು ಗ್ರಾಮೀಣ ಪ್ರದೇಶದ ರೈತ ಕುಟುಂಬದಿAದಲೆ ಬಂದವರು. "ಅವರು ವಿದ್ಯಾಭ್ಯಾಸ ಪಡೆದ ಶೈಕ್ಷಣಿಕ ವ್ಯವಸ್ಥೆ, ತಜ್ಞರನ್ನು ರೈತ ಸಮುದಾಯದೊಂದಿಗೆ ಸಂವಾದ ಸಾಧ್ಯವಿಲ್ಲದಷ್ಟು ಪರಕೀಯಗೊಳಿಸುತ್ತಿದೆ" "ಅಂಥವರು ಪಧವೀಧರರಾಗುತ್ತಿದ್ದಂತೆ ಪಾರಂಪರಿಕ ಕುಲಕಸುಬಿಗೆ ವಿದಾಯ ಹೇಳಿ "ಶತಾಯಗತಾಯ" ಸರಕಾರಿ ನೌಕರಿಗಿಟ್ಟಿಸಿ ಕೊಂಡು ಜೀವನಾಧಾರ ಕಂಡುಕೊಳ್ಳುತ್ತಾರೆ" ತಮ್ಮ ಪ್ರತಿಫಲದ ಆಕಾಂಕ್ಷಿಗಳಿವರು. ಸಮಾಜದ ಏಳ್ಗೆಗಿಂತ ತಮ್ಮ ಸುಖದ ಏಳ್ಗೆಯನ್ನಷ್ಟೆ ಬಯಸುವ ಪ್ರೌವೃತ್ತಿ ಗುಣದವರು. ಕೃಷಿ ಶಿಕ್ಷಣದ ಸಾಧ್ಯತೆಗಿಂತ ದುಡಿಮೆ ಎಂಬ ವೃತ್ತಿ; ಕೃಷಿಕ ಜನರಿಗೆ ಸವಾಲಾಗಿಯೇ ಒಡ್ಡುತ್ತದೆ.

ಸಂಸಾರ ಮತ್ತು ಸಂಸ್ಕಾರದ ಸುಳಿಯಲ್ಲಿ ಶಿಕ್ಷಣದ ಪಾತ್ರ: ಅಮರೇಶ ನುಗಡೋಣಿಯವರ "ಬೇಟೆ" ಕತೆಯಲ್ಲಿ ಕೃಷಿಕ ಸಂಸಾರ ಸಮೇತ ತುಂಬಿದ ಬಂಡಿಯಲ್ಲಿ ಕಾಡಿನ ಮಧ್ಯೆ ಹೋಗುವ ಸಂದರ್ಭ. "ಗಂಗವ್ವನ" ಮಗ "ಭೂಮಿಲಿಂಗಾ" ಹೋದ್ನಪ್ಪೋ ಹ್ವಾದ"! ಎಂದು ಸತ್ತವನ ಮುಂದೆ ಅಳುತ್ತ ಗೋಳಿಡುವುದು. ಈ ಕುಟುಂಬದ ಗೋಳು ತುಂಬಲಾರದ ನಷ್ಟ ಸಂಭವಿಸಿದೆ. ಜನರಿಲ್ಲದ ಕಾಡಿನಲ್ಲಿ ಸತ್ತ ಮಗನ ಸಂಸ್ಕಾರ ಮಾಡುವ ಜ್ಞಾನದ ಪರಿಕಲ್ಪನೆ ಆ ಕುಟುಂಬದ ಅರಿವಿಗೆ ಬಂದ ಮೊದಲ ಪ್ರಶ್ನೆ. ಎಲ್ಲಿ ಸಂಸ್ಕಾರ ಮಾಡಬೇಕೆಂಬ ದುಃಖದ ಕಳವಳದಲ್ಲಿ ಪ್ರಶ್ನೆ ಕಾಡುತ್ತಿರುವಾಗ; ಗಂಡನಾದ "ಪರಶಿವಯ್ಯನು" ಅಣ್ಣನಾದ "ಬೋರಯ್ಯನು" ಉಳಿದ ಮಕ್ಕಳನ್ನು ಸಮಾಧಾನ ಮಾಡುತ್ತ ಸತ್ತ ಮಗನನ್ನು "ಅಲ್ಲೆ ಹಳ್ಳದ ದಂಡ್ಯಾಗ ಮಣ್ಣು ಮಾಡಲು ಎದ್ದರು. ಮಾರು ದೂರ ಒಂದು ಈಚಲ ಗಿಡದ ಕೆಳಗೆ ಉಸುಕನ್ನು ಕೈಯಿಂದ ಕೆದರಿ ಮೊಳ ಉದ್ದದ, ಮೊಳ ಅಗಲದ ಕುಣಿತೋಡಿದರು "ಈ ಕುಣಿಯ ಅಳತೆ ಅಗಲ ಇವುಗಳ ಪರಿಕಲ್ಪನೆ ಜ್ಞಾನದ ಅರಿವಿನಲ್ಲಿ ಶಿಕ್ಷಣ ಕಲಿತಂತೆ ಬಾಸವಾಯಿತು. ಈ ಕುಣಿಯ ಒಳಗೆ ಸತ್ತ ಮಗುವಿನ ದೇಹವನ್ನು ಇಟ್ಟು ಮಣ್ಣನ್ನು ಹಾಕಿ ಸಂಸ್ಕಾರ ಮಾಡುವ ಜ್ಞಾನದ ಪರಿಕಲ್ಪನೆ ಆ ಸಂದರ್ಭದಲ್ಲಿ ಅವರ ಅರಿವಿಗೆ ಬಂದದ್ದು; ಬದುಕಲ್ಲಿ ಅನುಭವಿಸಿದ ಕಲಿಕೆಯ ಪ್ರಕ್ರಿಯೆ; ಪ್ರಯೋಗಾತ್ಮಕ ಕಲಿಕೆ ಎನಿಸಿದೆ. ಶಿಕ್ಷಣದ ಕಲಿಕೆಯಲ್ಲಿ ವ್ಯವಸ್ಥೆಯ ಪದ್ಧತಿ ಜಾರಿಗೆ ತಂದದ್ದು ಶಿಕ್ಷಣ ಪಡೆದವರು. ಶಿಕ್ಷಣ ಪಡೆದವರಿಗಿಂತ ಹೆಚ್ಚು ಜ್ಞಾನದ ಅರಿವು ಕಲಿಯದೆ ಇರುವ ಕೃಷಿಕರಲ್ಲಿ ಕಂಡುಬರುತ್ತದೆ. ಕೃಷಿಕರ ಸಂಸ್ಕಾರದ ವಿಧಿ-ವಿಧಾನವೇ ಅವರವರ ಆಲೋಚನೆಗೆ ಸಂಬAಧಿಸಿದ್ದು, ಅದು ಶಿಕ್ಷಣದಿಂದಲ್ಲ, ಜೀವನಾನುಭವಗಳ ಸಾರ.

ಕೃಷಿಯಲ್ಲಿದ್ದು ಶಿಕ್ಷಣ ಕಲಿತ ಮಗುವಿಗೆ ಗುರುಗಳಿಂದ ಪುರಸ್ಕಾರ: ಅಮರೇಶ ನುಗಡೋಣಿಯವರ "ಬೇಟೆ" ಕಥೆಯಲ್ಲಿ ಗಂಗವ್ವನ ಮತ್ತೊಬ್ಬ ಮಗ "ಸಂಜೀವ ಮಾತ್ರ ಸಾಲಿ ಕಲಿತು 'ಶ್ಯಾಣ್ಯಾ ಹುಡುಗ' ಅಂತ ಮಾಸ್ತರರಿಂದ ಕರೆಸಿಕೊಂಡಿದ್ದ. ಕೇರ್ಯಾಗಿನ ಮಂದಿಗೆ ಪೇಪರು ಓದಿ ಹೇಳ್ತಿದ್ದ. ಪತ್ರ

ಬರುಕೊಡ್ತಿದ್ದ. ಹೆಡ್ಡುಮಾಸ್ತಾರನೆ ಕೇರಿತನಕ ಬಂದು, ಗಂಗವ್ವ, ನಿನ್ನ ಮಗ ಸಂಜೀವ ಬಾಳ ಹುಷಾರಾನವ್ವ, ಅವನ್ನ ಕೂಲಿ ನಾಲಿ ಮಾಡಿಯಾದ್ರೂ ಓದಿಸವ್ವ, ಓದಿನ್ಯಾಗು ಅಷ್ಟೇ, ಗಿಡನೆಟ್ಟು ಬೆಳಸಾದ್ರಾಗು ಅಷ್ಟೇ ನಮ್ಮ ಸಾಲಿ ಪೌಳ್ಯಾಗ ಏಸುಗಿಡ ಬೆಳಿಸ್ಯಾನ ನೋಡು. ಗಿಡ ಬೆಳಸದ್ರಾಗ ಬಹುಮಾನ ತಗಂಡಾನ" ಒಂದು ಕಡೆ ಗಂಗವ್ವÀ ಮಗ ಸಂಜೀವನನ್ನ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಹಂಬಲ. ಇನ್ನೋಂದೆಡೆ ತನ್ನ "ಹೊಲ"ವನ್ನು ಉಳಿಸಿಕೊಳ್ಳುವ ಹೋರಾಟದ ತೊಡಕು. ಮತ್ತೊಂದೆಡೆ "ಭೂಮಿಲಿಂಗ" ಸತ್ತ ದುಃಖ ಮುಂತಾದ ನೋವುಗಳು ಕೃಷಿಕರಿಗೆ ಬದುಕಿನ ಪಾಠವನ್ನಾಗಿ ಕಲಿಸಿದವು.

ಪ್ರಕೃತಿಯ ಮೇಲೆ ಶಿಕ್ಷಣದ ಪ್ರಭಾವ: ಪೂರ್ಣಚಂದ್ರ ತೇಜಸ್ವಿಯವರ "ಕಿರಗೂರಿನ ಗಯ್ಯಾಳಿಗಳು" ಎಂಬ ಕತೆಯಲ್ಲಿ, "ವ್ಯವಸಾಯ ಇಲಾಖೆಯವರು ಶಂಕ್ರಪ್ಪನಿಗೆ ಆಧುನಿಕ ಬೇಸಾಯ ರೈತರಿಗೆ ತೋರಿಸಿಕೊಡಲು ಸಾಂದ್ರಬೇಸಾಯಕ್ಕೆ ಕಿರಗೂರಿನಲ್ಲಿ ಒಬ್ಬರನ್ನಾದರೂ ಒಪ್ಪಿಸಿ, ಒಂದು ಎಕರೆಯನ್ನಾದರೂ ಮಾಡಿಸಲೇಬೇಕೆಂದು "ಟಾರ್ಗೆಟ್" ಕೊಟ್ಟಿದ್ದರು". ಈ ಹೈಬ್ರಿಡ್ ಬೇಸಾಯದ ಬಲೆಯೊಳಗೆ "ಕರಿಯ"ನ ಹೊಲವನ್ನು ಗುರುತು ಮಾಡಿದರು. ಸಾಂದ್ರ ಬೇಸಾಯಕ್ಕೆ ಅಣಿಗೊಳಿಸಿದರು. ಆದರೆ "ಮಿಕ್ಕವರ ಗದ್ದೆ ಎಲ್ಲಾ ಹಿಳ್ಳು ಒಡೆದು ಹುಲು ಸಾಗಿ ಬೆಳೆದು ತೆನೆಕಟ್ಟುತ್ತಿರಬೇಕಾದರೆ ಕರಿಯನ ಗದ್ದೆಗಳು ಮಾತ್ರ ಸವೆದ ಹಳೆಯ ಪೊರಕೆಗಳಂತೆ ನೀರಿನಲ್ಲಿ ನಿಂತಿದ್ದವು". ಸಾಂದ್ರ ಬೇಸಾಯದ ಮೋಸಕ್ಕೆ ಬಿದ್ದ ಕರಿಯ ಒಂದು ವರ್ಷದ ಅನ್ನವನ್ನು ಕಳೆದುಕೊಂಡ. ಈ ಸಾಂದ್ರ ಬೇಸಾಯದ ಪರಿಣಾಮ ಫಲ ಸಿಗದೆ ಬೆಳೆ ನಾಶಹೊಂದಿತು. ಇದರ ಪರಿಣಾಮ "ಶಂಕರಪ್ಪ ಕಿರಗೂರಿಗೆ ಹೋದವನು ಕರಿಯನ ಗದ್ದೆಯಲ್ಲಿ ಹುಗಿದಿದ್ದ ಡಿಪಾರ್ಟಮೆಂಟಿನ ಬೋರ್ಡು ತೆಗೆದು ಅಲ್ಲೇ ಪಕ್ಕದಲ್ಲಿದ್ದ ಮಾರನ ಗದ್ದೆಗೆ ನಿಲ್ಲಿಸಿ, "ಫೀಲ್ಡ್ಡೇ" ದಿನ ಸುಮಾರು ಜನ ರೈತರು, ತಾಶೀಲ್ದಾರರು, ಬಿಡಿಓ, ಎಲ್ಲಾ ಬರ್ತಾರೆ. ಕರಿಯನ ಗದ್ದೆ ತೋರಿಸಿದರೆ ನನ್ನ ಕೆಲ್ಸ ಹೋಗುತ್ತೆ". ಇದೇ ರೀತಿಯಲ್ಲಿ ಶಿಕ್ಷಣ ಕಲಿತ ಅಧಿಕಾರಿಗಳ ಪ್ರತಿಷ್ಠೆ ಮರ್ಯಾದೆಗೋಸ್ಕರ ಏನು ಅರಿಯದ ಮುಗ್ದ ಕೃಷಿಕರ ಹೊಟ್ಟೆಯ ಮೇಲೆ ಹೊಡೆಯುವುದು, ಸರಿಯಾದ ಮಾರ್ಗವಲ್ಲ. ಸಮಾಜದಲ್ಲಿ ಎಲ್ಲರೂ ಸಮಾನರು. ಸಮಾನತೆಯಿಂದ ಬದಕುವ ಜನರನ್ನು ಜಾತಿಯನ್ನುವ ಪಿಡುಗುವಿನ ಹೆಸರಲ್ಲಿ ಕೃಷಿಕರ ಮಧ್ಯೆ ಜಗಳ ಹಚ್ಚಿ, ಆ ಹೊಡೆದಾಟ ನೋಡಿ ಸಂತೋಷಪಡುವವರು ಅಧಿಕಾರಿಗಳು. ಉಚ್ಚಜಾತಿಗಳು ಶಿಕ್ಷಣದ ಹೆಸರಿನಲ್ಲಿ ತಾರತಮ್ಯದ ವಿಷ ಬೀಜ ಹುಣಿಸಿದಂತೆ ನಟಿಸುತ್ತವೆ. ಇವುಗಳ ದಾಳವನ್ನ ಎತ್ತಿಕಟ್ಟುವುದು, ಅಧಿಕಾರಿಗಳಿಗೆ ಸರ್ವೇಸಾಮಾನ್ಯ. ಇಬ್ಬರ ನಡುವಿನ ಜಗಳ ಮತ್ತು ಹೊಡೆದಾಳುವ ನೀತಿ ಅಧಿಕಾರಿಗಳಿಗೆ ತುಂಬಾ ಸುಲಭಮಾರ್ಗ. ಕೃಷಿಕರೂ ಶಿಕ್ಷಣ ಕಲಿಯದೆ ಇದ್ದರು ಇಂತಹ ಒಳತಂತ್ರಗಾರಿಕೆಯನ್ನ ಗ್ರಹಿಸಿಕೊಳ್ಳುತ್ತಾರೆ.

ಅಕ್ಷರ ಕಲಿಯದೇ ಇದ್ದರು ಕೃಷಿಕರ ಜ್ಞಾನ ಅಪಾರ: "ಕಿರಗೂರಿನ ಗಯ್ಯಾಳಿಗಳು" ಎಂಬ ಕತೆಯಲ್ಲಿ "ಉಳುಕುತೆಗೆಯೋ" ವಿದ್ಯೆಯ ಪರಿಕಲ್ಪನೆ ಕೃಷಿಕನಾದ ತಳಸಮುದಾಯದ "ಕರಿಯನಿಗಿರುವ ಜ್ಞಾನ ಮತ್ಯಾರಿಗೂ ಬರುವುದಿಲ್ಲ. ಈ ತಿಳುವಳಿಕೆ ಯಾರಿಗೆಂದವರಿಗೆ ಬರುವಂತದ್ದಲ್ಲ. ಇದರ ತಿಳುವಳಿಕೆ ನಾಟಿ ವೈದ್ಯಕೀಯ ಅನುಭವ ಮತ್ತು ಪರಂಪರೆಯಿAದ ಬಂದಿದ್ದು. ವೈದ್ಯರಿಗೂ ಇದರ ಪರಿಕಲ್ಪನೆ ಇರುವುದಿಲ್ಲ. ಯಾವ ಶಿಕ್ಷಕ, ಶಿಕ್ಷಣದ ಮೂಲಕ ಕಲಿಸಿದ್ದಲ್ಲ. ಅದರ ಜ್ಞಾನವನ್ನು ಸ್ವತಃ ಕೃಷಿಕರೆ ಪಡೆದುಕೊಂಡದ್ದು ವಿಶೇಷ. ಈ ಕತೆಯಲ್ಲಿ "ಕರಿಯ ಮೂರು ಜನರ ಸೊಂಟದ ಉಳುಕು "ತೆಗೆದದ್ದು ಯಾವ ಶಾಲೆಯಿಂದ ಕಲಿತಂತಹ ವೈದ್ಯರಿಂದಲೂ ಸಾಧ್ಯವಾಗಿಲ್ಲ. ಶಿಕ್ಷಣ ಕಲಿತ ವೈದ್ಯರು ಹಣದ ವ್ಯಾಮೋಹಿಗಳು. ಆದರೆ ಕೃಷಿಕರು ಯಾವ ಪದವಿ ಪಡೆದವರಲ್ಲ ಎಂಬುದೆ ಇಲ್ಲಿ ವಿಶೇಷ. ಕೃಷಿಕರಲ್ಲಿ ಕೆಲವರು ಶಿಕ್ಷಣ ಕಲಿತರು ಅಲ್ಪಸ್ವಲ್ಪ. ಅವರು ಆಧುನಿಕತೆಯ ಕೃಷಿಗೆ ಮಾರುಹೋಗುತ್ತಾರೆ. ಕೆಲವರು ಕೃಷಿಬದುಕನ್ನು ಮರೆತು ನಗರಕ್ಕೆ ದುಡಿಯಲು ಹೋಗುತ್ತಿದ್ದಾರೆ. ಇನ್ನೂ ಕೆಲವರು ಭೂಮಿಯನ್ನು ಮಾರಿ ಬಂದ ಹಣದಿಂದ ಸಣ್ಣಪುಟ್ಟ ವ್ಯಾಪಾರ ಮಾಡಿ ಬದುಕುತ್ತಿದ್ದಾರೆ. ಇದು ಕೃಷಿಕರ ಸಂಸ್ಕೃತಿಯ ಬದಲಾವಣೆಯೂ ಹೌದು, ಸ್ಥಿತ್ಯಂತರದ ಪಲ್ಲಟವೂ ಹೌದು.

ಸಮಾನತೆಯೇ ಶಿಕ್ಷಣದ ಪರಿವರ್ತನೆ: ದೇವನೂರು ಮಹಾದೇವ ಅವರ "ಡಾಂಬರು ಬಂದುದು" ಎಂಬ ಕತೆಯಲ್ಲಿ "ಎಸ್ಸೆಲ್ಸಿ ಹತ್ತಿಬಂದ ನಾಕಾರು ಜನರೂ, ಲಕುಮ, ರಾಜಪ್ಪ, ಮಾದು, ಶಂಭು" ಈ ಹೆಸರುಳ್ಳ ಮಕ್ಕಳಿಗೆ "ಮೇಲು ಜಾತಿ ಕೀಳು ಜಾತಿ ಅನ್ನದೆ ಒಂದೇ ಹೊಟ್ಟೆಯಿಂದ ಬಿದ್ದಂತೆ ಹೊಲಾರ ಲಕುಮನೊಡನೆ ತಿರುಗುವುದು" ಇಲ್ಲಿ ಯಾವ ವರ್ಗಗಳು ಮೇಲಲ್ಲ ಕೀಳಲ್ಲ. ಎಲ್ಲರೂ ಸಮಾನರು. ಇದರ ಬೆಳವಣಿಗೆಗೆ ಕಾರಣ ಶಿಕ್ಷಣದ ಪರಿವರ್ತನೆ. ಈ ಸಮಾನತೆ ಊರ ಪಟೇಲನಿಗೂ ಸಹಿಸಲು ಆಗದೆ ಅವರವರ ಅಪ್ಪಂದಿರ ಮೂಲಕ ಜಾತಿಯ ಸೋಗಿನಲ್ಲಿ ಮಕ್ಕಳ ಸಮಾನತೆಯನ್ನು ಹೊಡೆಯುವ ಒಡಂಬಡಿಕೆ. ಹಣ ಸಂಪತ್ತು ಇದ್ದವರು ಮಾಡುವ ಹೀನಾಯ ಕೃತ್ಯವಿದು. ಶಿಕ್ಷಣದ ಪರಿವರ್ತನೆಯಲ್ಲಿ ನಗರೀಕರಣ ಬೆಳೆಯುತ್ತಿದೆ. ರೋಡು ಆಗಲೀಕರಣ, ದೊಡ್ಡ ದೊಡ್ಡ ಹೋಟೆಲ್ಗಳು,

ಕಾಂಪ್ಲೆಕ್ಸ್ಗಳು ಬೆಳೆದುನಿಲ್ಲುತ್ತಿವೆ. ಬೆಳೆಯುತ್ತ ಹೋದಂತೆ ಭೂಮಿ ಪ್ರಮಾಣ ಎಳ್ಳಷ್ಟೂ ಉಳಿಯುತ್ತದೆ. ಮನುಷ್ಯ ಆಧುನಿಕತೆಗೆ ಬೆಳೆದಂತೆ ಪರಿಸರದಮೇಲೆ ಏಕಾಏಕಿ ದುಷ್ಪರಿಣಾಮಬೀರುತ್ತದೆ. ಪ್ರಕೃತಿಯನ್ನು "ಹಿಂದೆ ನೋಡಿದಷ್ಟೂ ಎತ್ತರಕೆ ಹಬ್ಬುತ್ತಿದ್ದ ಅರಳಿಮರಗಳು ಈಗ ನೆಲಸಮವಾಗಿವೆ. ಸೆಟೆದುನಿಂತ ಅರಳಿಮರಗಳ ಮರೆಯಲ್ಲಿ ಊರಕಂಡವರಿಗೆ ಈಗ ಊರು ಬಿಕೋ ಅನ್ನಿಸುತ್ತದೆ". ಮರ ಬೆಳೆದ ಸ್ಥಳದಲ್ಲಿ ಈಗ ಆಳೆತ್ತರದ ಕಲ್ಲು ಚಕ್ರದ ಮಿಷನ್ನುಗಳು ಹೊಗೆಬಿಟ್ಟು" ಪ್ರಕೃತಿಯನ್ನ ವಿನಾಶದತ್ತ ಕೊಂಡೋಯ್ಯುತ್ತಿವೆ. ಏಷ್ಟೆ ಎತ್ತರಕ್ಕೆ ನಗರೀಕರಣ ಬೆಳೆದರು ಪರಿಸರದ ಮೇಲೆ ತ್ಯಾಜ್ಯವಸ್ತುಗಳು ಏತೇಚವಾಗಿಬೀಳುತ್ತಿದೆ. ಪ್ರಕೃತಿಯ ಮೇಲೆ ಆಗುವ ದುಷ್ಪರಿಣಾಮ ಮನುಷ್ಯ ಎದುರಿಸುತ್ತಿದ್ದಾನೆ. ಇದಕ್ಕೆಲ್ಲಾ ಶಿಕ್ಷಣದ ಬೆಳವಣಿಗೆ ಒಂದು ಕಾರಣವಾದರೆ ಇದರ ಹಿಂದೆ ಇರುವ ದುರುದ್ದೇಶ ಹಣ ಆಸ್ತಿ, ಭೂಮಿಯನ್ನು ಕಬಳಿಸುವ ವ್ಯಾಮೋಹ ಮತ್ತೊಂದು ಕಾರಣವೆಂದು ನನಗೆ ಅನಿಸುತ್ತದೆ. ಇದೇ ಸಾಂಸ್ಕೃತಿಕ ರಾಜಕೀಯದಲ್ಲಿನ ಶಿಕ್ಷಣದ ಒಂದು ಭಾಗ.

ಕುವೆಂಪುರವರ "ಆದರ್ಶಸಾಧನೆ" ಎಂಬ ಕತೆಯಲ್ಲಿ ನಾಯಕನಾದ "ಚಂದ್ರ" "ಸರ್ವೋಚ್ಚ ಪ್ರಥಮ ವರ್ಗದಲ್ಲಿ ತೇರ್ಗಡೆ ಹೊಂದಿದವನು. ಕೃಷಿ ಕುಟುಂಬದಲ್ಲಿ ಬೆಳೆದವನು. ಕೃಷಿಕರ ಬದುಕನ್ನು ಕುರಿತು ಹೀಗೆ ಹೇಳುತ್ತಾನೆ. "ನಾನು ಫೇಲಾದುದಕ್ಕೆ ವಿದ್ಯಾಭ್ಯಾಸವನ್ನು ನಿಲ್ಲಿಸಲಿಲ್ಲ. ಅ ಧೈರ್ಯವೆಂಬುದು ನಾನಿದ್ದೆಡೆ ಕಾಲಿಡಲರಿಯದು. ಆದರೆ ದೇಶೋದ್ಧಾರದ ದೃಷ್ಟಿಯಿಂದ ಗ್ರಾಮ ನಿವಾಸಿಯಾಗಿದ್ದೇನೆ. ವಿದ್ಯೆ ಎಂಬುದು ಪರೀಕ್ಷೆಗಳನ್ನು ಪ್ಯಾಸುಮಾಡಿದ ಮಾತ್ರದಿಂದ ಲಭಿಸುವುದಿಲ್ಲ. ಸಾಕ್ರೆಟೀಸನು ಎಂ. ಎ. ಪ್ಯಾಸು ಮಾಡಿದ್ದನೆ? ವೇದವ್ಯಾಸರು ವಿಶ್ವವಿದ್ಯಾನಿಲಯದಲ್ಲಿ ಓದಿದ್ದರೇ? ವಾಲ್ಮೀಕಿಗೆ ಸ್ಕಾಲರ್ಷಿಪ್ ಬರುತ್ತಿತ್ತೆ? ಎಲ್ಲರೂ ಪಟ್ಟಣಗಳಲ್ಲಿ ಸೇರಿ ಬಿಟ್ಟರೆ ಹಳ್ಳಿಯನ್ನು ಉದ್ದಾರ ಮಾಡುವವರಾರು? "ನಾನಿಲ್ಲಿ ಹಳ್ಳಿಯವರಿಗೆ ಆರೋಗ್ಯ ವ್ಯವಸಾಯ ಮೊದಲಾದುವುಗಳ ವಿಚಾರದಲ್ಲಿ ಉಪನ್ಯಾಸ ಮಾಡುತ್ತಿದ್ದೇನೆ. "ಗ್ರಾಮ ಪುನರುಜ್ಜೀವ ಸಂಜೀವಿನೀ" ಇದ್ದಂತೆ. ಎಂಬ ಒಂದು ದೊಡ್ಡ ಗ್ರಂಥವನ್ನು ಬರೆಯಲು ಸಾಮಾಗ್ರಿಗಳನ್ನು ಒಟ್ಟುಗೂಡಿಸುತ್ತಿದ್ದೇನೆ. ಅಲ್ಲದೆ ಅಧ್ಯಯನಕ್ಕೂ ಹಳ್ಳಿಯೇ ವಾಸಿ" ಹಳ್ಳಿಗಳಲ್ಲಿ ಹೆಚ್ಚು ಅನಕ್ಷರತೆ ತೂಗುತ್ತಿದೆ. ಅವರ ಅಭಿವೃದ್ಧಿಗಾಗಿ ಶಿಕ್ಷಣ ಕಲಿತವರು ಶ್ರಮಿಸುವುದು. ಆದರ್ಶ ವ್ಯಕ್ತಿಗಳ ತತ್ವಗಳನ್ನು ಪಾಲಿಸುವಂತೆ ಮಾರ್ಗದರ್ಶನ ನೀಡುವುದು ಉತ್ತಮ ನಿದರ್ಶನ.

ಕುವೆಂಪುರವರ "ಗಂಟು ಅಥವಾ ಗುಪ್ತಧನ" ಕತೆಯಲ್ಲಿ "ಭೈರಾಗಿ" ಹಳ್ಳಿಯವರನ್ನು ಭಯಗೊಳಿಸಲೋಸುಗವೂ ಶಿಕ್ಷಸಲೋಸುಗವೂ ಅವನು ದನಗಳು ಮೇಯುವ ಬಯಲಿನಲ್ಲಿ ತನ್ನಲ್ಲಿದ್ದ ವಿಷದ ಹುಡಿಯನ್ನು ಚಲ್ಲುತ್ತಿದ್ದನು. ಮೂಕಪ್ರಾಣಿಗಳು ಹುಲ್ಲಿನೊಡನೆ ವಿಷವನ್ನು ತಿಂದು ಸಾಯುತ್ತಿದ್ದುವು ಮಾನವೀಯತೆ ಇಲ್ಲದ ಹಣದ ದುರಾಸೆಯುಳ್ಳ ವ್ಯಕ್ತಿಗಳು, ಈ ಬುದ್ಧಿವಂತಿಕೆಯಿAದ ಜನರನ್ನು ತಮ್ಮ ಕಡೆ ಆಕರ್ಷಿಸುವುದಕ್ಕೆ ಈ ತಂತ್ರಗಾರಿಕೆ ಬಳಸುವರು. "ನಮ್ಮ ದೇಶದ ಸನ್ನೇಸಿ ಭೈರಾಗಿಗಳ ಶಾಪಮಹಿಮೆಗೆ ದೈವಿಕ ಕಾರಣಗಳಿಗಿಂತಲೂ ಇಂತಹ ಭೌತಿಕ ಕಾರಣಗಳೆ ಹೆಚ್ಚು" ಕಂಡುಬರುತ್ತದೆ. "ಮನುಷ್ಯರನ್ನೆ ಕೊಲ್ಲಲು ಹಿಂಜರಿಯದವರು ಪ್ರಾಣಿಗಳನ್ನು ಕೊಲ್ಲಲು ಹೆದರುತ್ತಾರೆಯೇ? ಮಾನವೀಯತೆ ಇಲ್ಲದ ಕ್ರೂರಿಗಳು ತಮ್ಮ ಸ್ವಾರ್ಥಕ್ಕಾಗಿ, ಕೃಷಿಕರ ಜೀವನದ ಜೊತೆ ಆಟವಾಡುವುದು; ಕರುಣೆ ಇಲ್ಲದ ನಯವಂಚಕರು. ಬುದ್ಧಿವಂತಿಕೆಯ ಜಾಣ್ಮೆವುಳ್ಳ ಪ್ರಬಲ ಗಾಯಿಗಳು ಕೃಷಿಕರ ಮೇಲೆ ದರ್ಪತೋರಿಸುತ್ತಿದ್ದಾರೆ. ಆ ಸಮಾಜದ ಜನರನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವ ಪ್ರಹಾರವಿದು. ತುಳಿಯುವ ಬೌದ್ಧಿಕ ಸಂಚು ಕೃಷಿಕರಿಗೆ ವಿಷಾದನೀಯ ಸಂಗತಿ.

ಬುದ್ಧಿವAತರಿAದ ಕೃಷಿಕನ ಮೇಲೆ ಆಗುವ ಪರಿಣಾಮ

ಮುಗ್ಧ ರೈತನ ಶೋಷಣೆಯ ಚಿತ್ರಣ: ಭೈರಾಗಿಯೂ ಹಣವನ್ನು ವಂಚಿಸುವ ಸುಲಭ ತಂತ್ರಗಾರಿಕೆ "ಈ ಗಂಟಿನ ಅಧಿದೇವತೆ" ಎರಡು ಸಾರಿಯೂ ಪ್ರತ್ಯಕ್ಷವಾಗಿ ಭಯಂಕರವಾದ ಕೋರೆದಾಡೆಗಳನ್ನು ಮಸೆಯುತ್ತ ನನ್ನನ್ನು ಸಂಹರಿಸಲು ಬಂದಾಗ ನಾನು ನನ್ನ ರಕ್ತವನ್ನೇ ಚೆಲ್ಲಿ ಮಂತ್ರಗಳ ಬಲದಿಂದ ಅದಕ್ಕೆ ತೃಪ್ತಿಯಾಗಿ ಹಿಂತಿರುಗುವAತೆ ಮಾಡಿದ್ದೇನೆ ಇಲ್ಲಿನೋಡು, ರಕ್ತ!" ಭೈರಾಗಿಯ ಈ ಚಾತುರ್ಯದ ಕೈಚಳಕವನ್ನ; ಉಳುವಯೋಗಿ "ಮಂಜಣ್ಣ"ನು ಗ್ರಹಿಸುತ್ತಿಲ್ಲ. ಭೈರಾಗಿ ಒಬ್ಬ ಹಣದ ಪಿಶಾಚಿ. ಧನವನ್ನು ಸೂಕ್ಷö್ಮವಾಗಿ ಮಂಜಣ್ಣನಿAದ ಪಡೆದು ಕೊಂಡ್ಯೊಯ್ಯಬೇಕು. ಎನ್ನುವುದೇ ಭೈರಾಗಿಯ ತಾತ್ವಿಕ ನಿಲುವು. ಇವನ ಒಳ ಮರ್ಮ ಕೃಷಿಕ ಮಂಜಣ್ಣನಿಗೆ ಮೋಸ ಮಾಡುವವರೆಗೂ ಅರ್ಥವಾಗಲಿಲ್ಲ. ಒಂದು ಕಡೆ ಮಂಜಣ್ಣನ ಹೊಲದ ಮಣ್ಣು ಅಗೆದು ಫಲವತ್ತಾದ ಭೂಮಿ ನಾಶಹೊಂದಿದೆ. ಇನ್ನೊಂದೆಡೆ ಭೈರಾಗಿ ಹೇಳಿದ್ದನ್ನೆಲ್ಲ ಕೇಳಿದ ಮಂಜಣ್ಣ, ಮನೆಯಲ್ಲಿರುವ ಹಣ ಸಂಪತ್ತು, ಕೊನೆಗೆ

ಹೆಂಡತಿಯ ತಾಳಿಯನ್ನು ಉಳಿಸಿಕೊಂಡು ಬೇರೆಲ್ಲಾ ಸಂಪತ್ತು ಕಳೆದುಕೊಂಡನು. ಮೌಢ್ಯತೆಯ ಮಬ್ಬಿನಲ್ಲಿ ಕುರಿ ಕೋಳಿ ಬಲಿಕೊಟ್ಟನು. ಭೈರಾಗಿ ದೋಚುವುದಕ್ಕೆ ಕಾರಣ ನಮ್ಮ ನಿಮ್ಮೆಲ್ಲರ ಮಂಕುತನ. ಮತ್ತೆ ಅತಿಯಾದ ದುರಾಸೆ. ನಮ್ಮನ್ನು ಬಲಿಪಶುವನ್ನಾಗಿ ಮಾಡಿಬಿಡುತ್ತವೆ.

ಕೃಷಿಯಲ್ಲಿ ಶಿಕ್ಷಣದ ಸಾಧ್ಯತೆಗಳು: ಶಿಕ್ಷಕನಿಗಿಂತಲೂ ಹೂದೋಟದಲ್ಲಿರುವ ಕೃಷಿಕನ ವ್ಯಕ್ತಿತ್ವ ಮುಖ್ಯವೆನಿಸುತ್ತದೆ. ಶಿಕ್ಷಕನಾದವನಿಗೆ ಗರ್ವದಿಂದ ತಾನು ಪ್ರೀತಿಸಿದ ಹುಡುಗಿಯನ್ನು ಹೂದೋಟದ ಕೃಷಿಕ ಮದುವೆಯಾಗಿರುವುದು. ತನ್ನ ಒಳಗಿನ ಕಿಚ್ಚಿಗೆ ಆಹ್ವಾನಿಸುತ್ತದೆ. ಕುವೆಂಪುರವರ "ಮೀನಾಕ್ಷಿಯ ಮನೇಮೇಷ್ಟರು" ಎಂಬ ಕತೆಯಲ್ಲಿ "ಹೂದೋಟದಲ್ಲಿ ತಿರುಗುತ್ತಿದ್ದ ವ್ಯಕ್ತಿ ಇಂಗ್ಲಿಷಿನಲ್ಲಿ ಮಾತಾಡಿಸಿದರು. ತಾವು ಯಾರನ್ನಾದರೂ ನೋಡಬೇಕೆ? ನನ್ನಿಂದ ಸಹಾಯವಾಗುವುದಾದರೆ ಮಾಡುತ್ತೇನೆ. ಯಾರನ್ನಾದರೂ ಮನೆಯನ್ನು ಹುಡುಕುತ್ತಿದ್ದಿರೇನು?" ಎಂತಹ ಇಂಪಾದ ಧ್ವನಿ! ಏನು ಸಭ್ಯತೆ ಮಾತಿನಲ್ಲಿ! ಮೇಷ್ಟರು ತೊದಲುತ್ತ "ಹೌ...ಹೌದು!" ಎಂದರು. ಹೂದೋಟದಲ್ಲಿರುವ ಕೃಷಿಕನ ಮಧುರ ಮಾತುಗಳು, ಕೃಷಿಕನ ಸಹಾನುಭೂತಿ ಈ ಕತೆಯಲ್ಲಿ ಕಲಿತ ಶಿಕ್ಷಕನಿಗಿಂತಲೂ ಉಪಕಾರಿ ಮನೋಭಾವನೆಗಳು ಅಭಿವ್ಯಕ್ತಗೊಂಡಿವೆ. ಆದರೆ ಮನೆ ಮೇಷ್ಟ್ರು ಏನಿಸಿಕೊಂಡವನು ಅವನನ್ನೇ ಕೊಲ್ಲಲು ಬಂದವನು ಕೊನೆಗೆ ಆತನ ಮಧುರ ಧ್ವನಿಗೆ, ತಲೆಬಾಗಿ; ಬಂದ ಉದ್ದೇಶ ಮರೆತು ಒಳಿತುವಿನ ಕಡೆಗೆ ಆಲೋಚಿಸುತ್ತಾನೆ. ಇದು ಅವರಿಬ್ಬರ ನಡುವಿನ ವ್ಯತ್ಯಾಸ ಇಷ್ಟೆ. ಶಿಕ್ಷಕರಿಗಿಂತಲೂ ಮಿಗಿಲಾದ ಇಂಗ್ಲೀಷನ್ನು ಮಧುರವಾಗಿ ಮಾತಾಡುವ ಕಲೆ ಕೃಷಿಕನಿಗೆ ಇದೆ ಎಂದರ್ಥ.

ಕುವೆAಪುರವರ "ಧನ್ವಂತರಿಯಚಿಕಿತ್ಸೆ' ಕತೆಯಲ್ಲಿ "ನಾಗರಿಕತೆ ಮತ್ತು ಸಂಸ್ಕೃತಿಗಳೊಡನೆ ಬದುಕುವ ಕೃಷಿಕರ ಅಸ್ಮಿತೆಯನ್ನು ನಗರೀಕರಣದ ನೆಲೆಯಲ್ಲಿ ನೋಡುವುದು. ರೈತನ ಬದುಕಿನ ಹೋರಾಟದ ಕ್ಷಣಗಳು ತನ್ನ ಜೀವವನ್ನು ಬಿಗಿದಪ್ಪಿ ಹಿಡಿದುಕೊಳ್ಳುವುದು. ನಗರೀಕರಣದ ವಿಷವರ್ತುಲದ ರೋಗಕಾರಿಗಳಾದ ದುಷ್ಟಪದ್ಧತಿಗಳು ರೈತನನ್ನು ಆಕ್ರಮಿಸಿಕೊಂಡಿದೆ. ಆ ರೋಗವೆನಿಸಿರುವ ನಗರೀಕರಣದ ಭಾರಗಳಾದ; ರೈಲು, ಮೋಟಾರು, ವಿಮಾನ, ಅಲೆಯಂಚೆ, ವಿದ್ಯುಚ್ಛಕ್ತಿ, ಬಂದೂಕ, ಬಾಂಬು, ಕಾಗದ, ಮುದ್ರಾ ಯಂತ್ರ ಇತ್ಯಾದಿ"ಗಳನ್ನು ರೈತ ತನ್ನ ಎದೆಯ ಮೇಲೆ ಹೊತ್ತು ನರಳುತ್ತಿರುವನು. ಪ್ರತಿಯೊಂದು "ಗಲ್ಲಿಯಲ್ಲಿ ಯಾರೂ ಅಸಹ್ಯ ಮಾಡಬಾರದು ಎಂದು ಬರೆದಿದ್ದ ಬೋರ್ಡಿನ ಕೆಳಗೆ; ಸಹಿಸಲಸಾಧ್ಯಾವಾದ ದುರ್ಗಂಧ, ಸಿನಿಮಾ, ನಾಟಕಶಾಲೆ, ಕಾರಖಾನೆ, ಸ್ಕೂಲು, ಕಲಾಶಾಲೆ, ಇತ್ಯಾದಿ". ಎಷ್ಟೇಲ್ಲಾ ನಾಗರೀಕತೆ ಬೆಳೆದರೂ, ಶಿಕ್ಷಣದ ಅರಿವು ಮನೆಮನೆಗೆ ತಲುಪಿದರೂ ಕೃಷಿಕನ ಬದುಕು ಕತ್ತಲೆಯಲ್ಲಿ ಕೊಳೆಯುತ್ತಿದೆ. "ಗುಡಿಸಲಿನ ಒಳಗಡೆ ಮಬ್ಬಗತ್ತಲೆ ಕವಿದಿತ್ತು. ಸರ್ವತ್ರವೂ ಹೊಗೆ ಹಿಡಿದು ಕರಿಬಲೆ ನೇತುಬಿದ್ದು ಕರ್‍ರಗಾಗಿತ್ತು. ಹಾರೆ, ಗುದ್ದಲಿ, ಹೆಡಗೆ, ಕುಕ್ಕೆ, ಮಡಕೆ, ನೇಗಿಲು, ಕತ್ತಿ ಇತ್ಯಾದಿ ಬೇಸಾಯದ ಉಪಕರಣಗಳು ಅಲ್ಲಲ್ಲಿ ಅಸ್ತವ್ಯಸ್ತವಾಗಿ ಚೆದರಿಬಿದ್ದಿದ್ದುವು". ಒಂದು ಕಡೆ ರೈತನ "ಆರ್ತನಾದ" ಇನ್ನೊಂದೆಡೆ ಶಿಕ್ಷಣ ಕಲಿತ ಡಾಕ್ಟರ್, ಮತ್ತೊಂದೆಡೆ ಪುರೋಹಿತರು, ಇವೆರೆಲ್ಲರಿಗೂ ಬೇಕಾಗಿರುವುದು ಚಿನ್ನದ ನಾಣ್ಯ, ಸಂಪತ್ತು, ಸುಪತ್ತಿಗೆಯ ಸುಖ, ದುಡಿಮೆ ಇಲ್ಲದಬದುಕು. ಒಟ್ಟಿನಲ್ಲಿ ಸಂಪತ್ತಿನ ಸುಲಿಗೆ, ಸುಲಿಗೆಯೇ ಬದುಕು. ಕರುಣೆ ಇಲ್ಲದ, ಮಾನವೀಯತೆ ಮರೆತ ಸಂಸ್ಕೃತಿಯ ಬದಲಾವಣೆ ಈ ಜಗದ ನಿಯಮವಾಗಿ ಬಿಟ್ಟಿದೆ. "ಚಿನ್ನದ ನಾಣ್ಯಗಳನ್ನು ಯಥೇಚ್ಛವಾಗಿ ನೀಡುವವರು ರೈತನ ಗುಡಿಸಲಿನಲ್ಲಿ ಇಳಿದುಕೊಂಡಿದ್ದಾರೆ ಎಂಬ ಸುದ್ದಿ ಹಬ್ಬಿದೆ. ಸುತ್ತ ಮುತ್ತಲಿದ್ದ ಊರಿನವರಿಗೂ ಅಧಿಕಾರಿಗಳಿಗೂ ರೈತನ ಯೋಗ ಕ್ಷೇಮದ ಚಿಂತೆ ಆ ಕ್ಷಣದಿಂದ ಹೆಚ್ಚಾಗುತ್ತದೆ, ಅದುವರೆಗೆ ಅಲ್ಲಿಗೆ ಕಾಲಿಡದಿದ್ದವರೆಲ್ಲರೂ ಬಂದು ಬಂದು ವಿಚಾರಿಸಿಕೊಂಡು ಹೋಗತೊಡಗಿದರು" ರೈತನ ಬಾಧೆಯನ್ನ ಬೇರೆಯಾವ ಅಧಿಕಾರಿಗಳಿಂದಲೂ ವಾಸಿಮಾಡಲು ಆಗುವುದಿಲ್ಲ. ಆ ನೋವನ್ನು ಅರ್ಥಮಾಡಿಕೊಂಡವನು "ಧನ್ವಂತರಿ" ವೈದ್ಯಮಾತ್ರ. ರೈತನ ಬಾಧೆ ಇಡೀ ದೇಶದ ಭಾರವನ್ನು ತನ್ನ ಎದೆಯ ಮೇಲೆ ಹೊತ್ತಿದ್ದಾನೆ. "ದೇವಾಲಯಗಳೂ ವಿದ್ಯಾನಿಲಯಗಳು ಕ್ರೀಡಾಮಂದಿರಗಳೂ ಪ್ರಮೋದವನಗಳೂ ಕರ್ಮಸೌಧಗಳೂ ಕಾರ್ಖಾನೆಗಳೂ ರಾಜಪ್ರಾಸಾದಗಳೂ ತಮ್ಮ ಭಾರವನ್ನೆಲ್ಲಾ ರೈತನ ಎದೆಯ ಮೇಲೆ ಹಾಕಿ, ಸಂಸ್ಕೃತಿ ಮತ್ತು ನಾಗರಿಕತೆ ಎಂಬ ಕೀರ್ತಿಯಿಂದ ಮೆರೆಯುತ್ತಿವೆ!.

ಕೃಷಿಕರು ಶಿಕ್ಷಣ ಕಲಿತವರಿಗೆ ನೀಡುವ ಗೌರವ: "ಬರಗೂರು ರಾಮಚಂದ್ರಪ್ಪ" ಅವರ ಕತೆ "ಕೆಂಪುನೆಲ" ಎಂಬ ಕತೆಯಲ್ಲಿ "ಮರಿಯಜ್ಜ" ಎಂಬ ಕೃಷಿಕ "ಅರರೆ! ಏಳ್ರಸೋಮಿ ಮ್ಯಾಲಕ್ಕೆ ಕಂಬಳಿನಾರ ಹಾಕ್ತೀನಿ" ನೆಪಕ್ಕೆ ಹೇಳುವ ಕರುಣೆಯ ಮಾತಲ್ಲ. ಶಿಕ್ಷಣ ಕಲಿತವನಿಗೆ ಪ್ರೀತಿ ವಾತ್ಸಲ್ಯದ ಮಮತೆಯ ಗೌರವದ ಧ್ವನಿ. ನೆಲದ ಮೇಲೆ ಕುಳಿತ ಪದವಿ ಪಡೆದಿರುವ "ರಾಜುವಿಗೆ" ಕೊಡುವ ಗೌರವ. ಈ ಗೌರವ ಶ್ರೇಯಸ್ಸುವಿಗೆ ಕಾರಣ ಕೃಷಿಕರ ಪರ ಧನಿ ಎತ್ತಿ ನಂಬಿಕೆ ಉಳಿಸಿದಕ್ಕಾಗಿ. ನಿಷ್ಕಲ್ಮಶ ಮನಸ್ಸುಳ್ಳ ಕೃಷಿ ಕೂಲಿಕಾರ್ಮಿಕರ ಭಾವನೆಗಳಿಗೆ ಸ್ಪಂದಿಸಿದ ಹಾಗೂ ಅರ್ಥ ಮಾಡಿಕೊಂಡನು.

"ರಾಜು" ಶಿಕ್ಷಣ ಪಡೆದು ಕೆಲಸಕ್ಕಾಗಿ ಅಲದಾಡಿ, ಕೆಲಸ ಸಿಗದ ನೀರುದ್ಯೋಗಿ. ಆದರೂ ಬಡತನದಲ್ಲಿರುವ ಜನರಿಗಾಗಿ, ಶೋಷಣೆ ವಿರುದ್ಧ ಧನಿಎತ್ತಿದ. ಕೃಷಿಕರ ಬದುಕಿಗಾಗಿ ಶ್ರಮಿಸಿದ. ಕೃಷಿಕರ ಜೀವನದ ಪಲ್ಲಟಗಳನ್ನು ಗುರುತಿಸಿದ. ಪ್ರಕೃತಿಯ ಘೋರ ಮಳೆಯಿಂದಾದ ಅನಾಹುತಗಳನ್ನು ಕಂಡುAಡನು.

ಶಿಕ್ಷಣದ ಹೊಸ ಆವಿಷ್ಕಾರಗಳು ಸಮಾಜಕ್ಕೆ ಪರಿಚಯವಾದವು. ಆ ಶೋಧನೆಗಳ ಸೇವೆಯು ಸಮಾಜದಲ್ಲಿ ನಡೆದ ಘಟನಾವಳಿಗಳನ್ನು ಮಾಧ್ಯಮಗಳ ಮೂಲಕ ಬಿತ್ತರಿಸುವುದು. ಅದರ ಉಪಯೋಗ ಸಮಾಜದ ಏಳ್ಗೆಗಾಗಿ ಜನರ ಸ್ಪಂದನೆಗಾಗಿ ಕಾರ್ಯನಿರ್ವಸುವುದು. ಬರಗೂರು ಅವರ "ಕಪ್ಪು ನೆಲದ ಕೆಂಪು ಕಾಲು" ಎಂಬ ಕತೆಯಲ್ಲಿ "ಟೆಲಿಫೋನ್ಭೂತ್"ನಲ್ಲಿ "ಹಲೊ ಹಲೊ ಹಲ್ಲೆ, ಹಲ್ಲೆ ಆಗ್ತಿದೆ ನಮ್ಮ ಮೇಲೆ... ಬೇಗ, ಬೇಗಬನ್ನಿ" ಈ ಕೂಗು ಪೋಲಿಸರಿಗೆ ಅಧಿಕಾರಿಗಳಿಗೆ ತಲುಪುತ್ತದೆ. ಸಮಾಜದ ಬಡವರ ಕೃಷಿಕರ ಹಿತಾಸಕ್ತಿಗಿಂತ ಇದ್ದಂತವರ ಪರವಾಗಿಯೇ ಈ ಸೇವೆಗಳು ಕಾರ್ಯನಿರ್ವಯಿಸುತ್ತವೆ. ಆದರೂ ಆವಿಷ್ಕಾರಗಳ ಪರಿಚಯಿಸುವ ನಿಟ್ಟಿನಲ್ಲಿ ಜನತೆಯು ಹೊಸತನ್ನು ಕಂಡುಕೊAಡರು. ದುಡಿಯುವ ಸಲುವಾಗಿ ಅಭಿವೃದ್ಧಿಯ ಪಥದತ್ತ ಹೆಜ್ಜೆಹಾಕಿದರು.

ಯಾವುದೇ ಜಮೀನಿನಲ್ಲಿ ಕೂಲಿ ಕಾರ್ಮಿಕರು ಕೆಲ್ಸಮಾಡ್ತಿರುವಾಗ ಅಫಘಾತಕ್ಕೊಳಗಾದರೆ ಆ ಭೂಮಿಯ ರೂವಾರಿಗಳೇ ಖರ್ಚುಹಾಕಿ ಬದುಕಿಸಬೇಕು. ಆತನ ಕುಟುಂಬಕ್ಕೆ ಬಡ್ತಿಯನ್ನು ರವಾನಿಸಬೇಕು. ಇಲ್ಲದಿದ್ದರೆ ಪೇಪರ್ ವರದಿಗಾರ "ನಿಮ್ಮಂತ ಬಡ ಜನಗಳ ಕಷ್ಟ-ಸುಖ ಕೇಳಿ ತಿಳ್ಕೊಂಡು ಅದನ್ನು ಪೇಪರಲ್ಲಿ ಬರೆಯೋದು ನಮ್ಮಂಥವರ ಕೆಲಸ" ಈ ಮಾಹಿತಿಯು ಸಮಾಜದ ಎಲ್ಲಾ ಕಡೆ ನೇರ ಪಸರಿಸಿಬಿಡುತ್ತದೆ. ಪ್ರತಿಯೊಂದು ಮಾಧ್ಯಮಗಳು ಕೃಷಿಕರ ಮೇಲೆ ನಡೆಯುವ ಶೋಷಣೆಯ ಪರವಾಗಿ ಧನಿಗೂಡುತ್ತವೆ. ಕೆಲವು ಮಾಧ್ಯಮಗಳು ಅಧಿಕಾರಿಗಳ ಪರವಾಗಿಯೇ ಮಾತನಾಡುತ್ತವೆ. ಒಟ್ಟಿನಲಿ ಮಾಧ್ಯಮಗಳ ಆರಿವು ಕೃಷಿಕರ ಹೃದಯದಲ್ಲಿ ಮನೆಮಾತಾಗಿವೆ. ಆ ಮಾಧ್ಯಮಗಳ ಪ್ರಚುರ ಕೃಷಿಕರ ನೋವುಗಳನ್ನು ಹಂಚಿಕೊಳ್ಳಲು ಉಪಯುಕ್ತವಾಗಿವೆ ಎಂದೆನಿಸುತ್ತದೆ.

ಕಾಲಾವಧಿ: ಒಂದು ಸಮಸ್ಯೆ ಬಗೆಹರಿಸಲು ಬೇಕಾಗಿರುವ ಕಾಲ, ಸಮಯವೆಷ್ಟು? ಎಂಬ ಪ್ರಶ್ನೆ ಜಿದ್ದಿಗೆ ಬೀಳುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಕಲಿತವರಿಗಿಂತ ಕಲಿಯದೆ ಇರುವವರೇ ಹೆಚ್ಚು. ಅಕ್ಷರಜ್ಞಾನವಿಲ್ಲದ ಕೃಷಿಕರೇ ಪಂಚಾಯಿತಿಯ ನಾಯಕತ್ವ ವಹಿಸಿಕೊಳ್ಳುತ್ತಾರೆ. ನ್ಯಾಯ-ಅನ್ಯಾಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಿರ್ದಿಷ್ಟವಾದ ಉತ್ತಮ ತೀರ್ಪುನೀಡುತ್ತಾರೆ. ಒಂದು ಘಂಟೆ ಅಥವಾ ಎರಡು ಘಂಟೆಗಳ ಕಾಲದ ಸಮಯದಲ್ಲಿ ತೀರ್ಪು ನಿರ್ಧರಿಸುತ್ತಾರೆ. ಇವರ ತೀರ್ಮಾನವೇ ಅಂತಿಮ. ಇದನ್ನು ಯಾರು ಅಲ್ಲಗಳೆಯುವಂತಿಲ್ಲ, ಕೊಡುವ ತೀರ್ಪು ನ್ಯಾಯಯುತವಾದದ್ದೆ ಆಗಿರುತ್ತದೆ. ಆ ಕುಟುಂಬದ ಜೀವನ ಸುಖದಿಂದ ಕೂಡಿರುತ್ತದೆ. ಆದರೆ ಅಕ್ಷರ ಕಲಿತ ಅಧಿಕಾರಿಗಳ ನ್ಯಾಯಾಲಯಗಳಲ್ಲಿ ಯಾವುದೋ ಒಂದು ಸಮಸ್ಯೆ ಪರಿಹರಿಸಲು ಒಂದು ವರ್ಷವೇ ಅಥವಾ ಹತ್ತು ವರ್ಷಗಳೇ ಆಗಬಹುದು. ಉದಾಹರಣೆಗೆ ಗಂಡ-ಹೆAಡತಿಯರ ಸಮಸ್ಯೆ ವಿಚ್ಛೇದನ ಮಟ್ಟಕ್ಕೆ ಬೆಳೆದಿರುತ್ತದೆ. ಅದನ್ನು ನ್ಯಾಯಲಯಗಳಲ್ಲಿ ತೀರ್ಮಾನ ಕೈಗೊಳ್ಳಲು ಅವರಲ್ಲಿರುವ ಹಣಸಂಪತ್ತು, ಒಡವೆ ಎಲ್ಲದು ಕಳೆದುಕೊಂಡು ಕೊನೆಗೆ ಬದುಕಿನ ಸಮಯವನ್ನು ಕಳೆದುಕೊಂಡು, ಈ ನ್ಯಾಯಾಲಯದಿಂದಲೇ ಹೊರ ಹೋಗಲೂ ನೋಡುತ್ತಾರೆ. ಹೊರ ಹೋಗಲೂ ಸಾಧ್ಯವಿಲ್ಲದೆ, ನ್ಯಾಯದ ತೀರ್ಮಾನವು ಸಿಗದೆ ಕೋರ್ಟ್, ಪೋಲಿಸ್, ಮನೆಯೆಂದು ಅಲೆದಾಡುತ್ತ ತಮ್ಮ ಆಯಸ್ಸನ್ನೆ ಕಳೆದುಕೊಂಡು ಬಿಡುತ್ತಾರೆ. ಮಾನಸಿಕವಾಗಿ ದೈಹಿಕವಾಗಿ ಕೋರ್ಟ್ನಲ್ಲಿ ಕೊಳೆತುಬಿಡುತ್ತಾರೆ. ಇದು ಶಿಕ್ಷಣ ಕಲಿತವರಿಗೂ ಶಿಕ್ಷಣ ಕಲಿಯದ ಇರುವವರಿಗೆ ಇರುವ ವ್ಯತ್ಯಾಸ. ದಿನಗಳು ಉರುಳಿದಂತೆ ನಮ್ಮ ಬದುಕಿನ ಸುಖ-ದುಃಖಗಳು ಮತ್ತೆ ಮರುಕಳಿಸದು. ಜೊತೆಗೆ ನಮ್ಮ ಯೌವ್ವನವನ್ನು ಕೋರ್ಟ್ ಕಛೇರಿಯಲ್ಲಿಯೇ ಮುಗಿದುಬಿಡುತ್ತದೆ.

# REFERENCES

ಅಮರೇಶ ನುಗಡೋಣಿ, ೧೯೯೧, 'ಮಣ್ಣು ಸೇರಿತು ಬೀಜ', ಪಲ್ಲವ ಪ್ರಕಾಶನ ಚನ್ನಪಟ್ಟಣ ಪೋಸ್ಟ್, ಬಳ್ಳಾರಿ

ಅಮರೇಶ ನುಗಡೋಣಿ, ೧೯೯೭, 'ತಮಂಧದ ಕೇಡು', ಪಲ್ಲವ ಪ್ರಕಾಶನ ಚನ್ನಪಟ್ಟಣ ಪೋಸ್ಟ್ ಬಳ್ಳಾರಿ

ಆನಂದಿ ಸದಾಶಿವರಾವ್, ೧೯೮೫, 'ಕಲಾವಿದೆ(ಕಥಾಸಂಕಲನ)', ಯುಗ ಪುರುಷ ಪ್ರಕಟಣಾಲಯ, ಪಿ.ಬಿ.ನಂ.೧. ಕಿನ್ನಿಗೋಳಿ ಡಿ.ಕೆ. ಮಂಗಳೂರು

ಉಷಾ ಪಿ.ರೈ. ಕೆ., (ಸಂ), ೨೦೦೫, 'ಲೇಖಕಿಯರ ಸಣ್ಣಕತೆಗಳು ಭಾಗ-೨. (ಸಂಪುಟ೨)', ಸಾಗರ್ ಪ್ರಕಾಶನ, ಬೆಂಗಳೂರು

ಕರೀಗೌಡ ಬೀಚನಹಳ್ಳಿ, ೨೦೦೭, 'ಸಾಹಿತ್ಯ ವಿಸ್ತಾರ,' ಅಜಂತ ಪ್ರಕಾಶನ, ಬೆಂಗಳೂರು ೫೬೦೦೫೬

ಕುವೆಂಪು, ೧೯೪೦, 'ನನ್ನ ದೇವರು ಮತ್ತು ಇತರ ಕಥೆಗಳು', ಉದಯರವಿ ಪ್ರಕಾಶನ ವಾಣಿವಿಲಾಸಪುರಂ ಮೈಸೂರು - ೫೭೦೦೦೨

ಕೋದಂಡರಾಮ ಎನ್.ಕೆ. (ಸಂ), ೧೯೯೬, 'ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ', ರೂಪ ಪ್ರಕಾಶನ ಮೈಸೂರು

ಚನ್ನಪ್ಪ ಅಂಗಡಿ, ೨೦೧೫, 'ಕೃಷಿಕಾರಣ (ಕೃಷಿ ಲೇಖನಗಳ ಸಂಗ್ರಹ)', ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು- ೫೬೦೦೧೮

ದೇವನೂರ ಮಹಾದೇವ, ೧೯೯೨, 'ಎಲ್ಲಕತೆ, ಕಾದಂಬರಿಗಳು', ಅಭಿನವ ಪ್ರಕಾಶನ ವಿಜಯನಗರ, ಬೆಂಗಳೂರು- ೫೬೦೦೪೦

ಪೂರ್ಣಚಂದ್ರ ತೇಜಸ್ವಿ ಕೆ. ಪಿ., ೧೯೯೧, 'ಕಿರಗೂರಿನ ಗಯ್ಯಾಳಿಗಳು', ಪುಸ್ತಕ ಪ್ರಕಾಶನ ಸರಸ್ವತಿಪುರಂ, ಮೈಸೂರು - ೫೭೦೦೦೯

ಬರಗೂರು ರಾಮಚಂದ್ರಪ್ಪ ೨೦೧೬, 'ಕೆಂಪುನೆಲ', ಅಭಿರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು ೫೭೦೦೦೯

ಮನುಬಳಿಗಾರ್(ಸಂ), ೨೦೧೯, 'ಸಣ್ಣಕಥೆ (ದಲಿತ ಸಾಹಿತ್ಯ ಸಂಪುಟ)', ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೫೬೦೦೧

ಮೊಗಳ್ಳಿ ಗಣೇಶ್ ೨೦೦೧, 'ಭೂಮಿ (ಕಥಾಸಂಕಲನ)', ಪ್ರಿಸಮ್ ಬುಕ್ಸ್ ಬನಶಂಕರಿ ಎರಡನೆ ಹಂತ ಬೆಂಗಳೂರು

ಮೊಗಳ್ಳಿ ಗಣೇಶ್ (ಸಂ), ೨೦೦೯, 'ಉರಿದಾವೊ ನೇಗಿಲು', ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೀರಭದ್ರಪ್ಪ ಕುಂ. ೨೦೧೩, 'ಎಂಟರ್ ದಿ ಡ್ರಾಗನ್', ಸಪ್ನ ಬುಕ್ ಹೌಸ್ ಬೆಂಗಳೂರು-೫೬೦೦೦೯

ವಿಷ್ಣುಶಿAದೆ (ಸಂ), ೨೦೧೩, 'ಮಹಿಳಾ ಸಣ್ಣಕಥೆ (ಸಂಪುಟ-೨)', ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಾಪುರ